ಪನ್ಯಾಸ
ಥಮಾಲೆ

೨೪೨

ಭಾರತದಲ್ಲಿ ಕುಟುಂಬ ಯೋಜನೆಯ ಯಶಸ್ಸು

ಭೋಜರಾಜ ನಂದ್ಯಾಳ
ಎಂ.ಎ.

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಅಗಸ್ಟ, ೧೯೭೬

ರಜತ ಮಹೋತ್ಸವದ ಪ್ರಕಟನೆ

ಉಪನ್ಯಾಸ ಗ್ರಂಥಮಾಲೆ

೨೪೨

ಭಾರತದಲ್ಲಿ
ಕುಟುಂಬ ಯೋಜನೆಯ ಯಶಸ್ಸು

ಶ್ರೀ ಭೋಜರಾಜ ನಂದ್ಯಾಳ
ಎಂ.ಎ.

ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ

ಅಗಸ್ಟ, ೧೯೭೬

ಪ್ರಕಾಶಕರು :

ಸಿ. ಎಸ್. ಕಣವಿ

ನಿರ್ದೇಶಕರು,
ಪ್ರಸಾರಾಂಗವಿಸ್ತರಣ-ಪ್ರಕಟನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪ್ರಥಮ ಮುದ್ರಣ : ೫೦೦೦ ಪ್ರತಿಗಳು
ಅಗಸ್ಟ್, ೧೯೭೬

ಬೆಲೆ : ೨೫ ಪೈಸೆ

ಮುದ್ರಕರು :

ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ,
ಧಾರವಾಡ-೫೮೦೦೦೩

ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ವ್ಯಾಸಂಗವಿಸ್ತರಣ ಹಾಗು ಪ್ರಕಟನ ಶಾಖೆಯ ಮುಖಾಂತರ ಕೈಕೊಂಡು ನಡೆಸುತ್ತಿರುವ ಜ್ಞಾನಪ್ರಸಾರದ ಯೋಜನೆಗಳಲ್ಲಿ ಈ 'ಉಪನ್ಯಾಸ ಗ್ರಂಥಮಾಲೆ' ಅತ್ಯಂತ ಮುಖ್ಯವೂ, ಜನಪ್ರಿಯವೂ ಆಗಿರುವುದು ಹೆಮ್ಮೆಯ ಮಾತಾಗಿದೆ. ವಿಶ್ವವಿದ್ಯಾಲಯದ ಆಡಳಿತ ಕ್ಷೇತ್ರದಲ್ಲಿರುವ ಎಂಟು ಜಿಲ್ಲೆಗಳಲ್ಲಿಯೂ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸಲಾಗುತ್ತಿದ್ದು, ವಿಶ್ವವಿದ್ಯಾಲಯದ ಮತ್ತು ಇದಕ್ಕೆ ಸೇರಿದ ಕಾಲೇಜುಗಳ ಪ್ರಾಧ್ಯಾಪಕರು ಸಾಹಿತ್ಯ, ವಿಜ್ಞಾನ, ಸಾಮಾಜಿಕ ಶಾಸ್ತ್ರ ಮೊದಲಾದ ಶಾಖೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಆಯ್ದುಕೊಂಡು, ಶಾಸ್ತ್ರಸಮ್ಮತವಾದ ಸರಣಿಯಲ್ಲಿ, ಜನಸಾಮಾನ್ಯರಿಗೆ ತಿಳಿಯುವ ಶೈಲಿಯಲ್ಲಿ ಈ ಶಿಬಿರಗಳಲ್ಲಿ ಉಪನ್ಯಾಸಗಳನ್ನು ಕೊಡುತ್ತಾರೆ. ವಿಶ್ವವಿದ್ಯಾಲಯದ ಜ್ಞಾನಭಾಂಡಾರದ ಅಲ್ಪಾಂಶವನ್ನಾದರೂ ಮಹಾಜನರ ಮನೆಬಾಗಿಲಿಗೆ ಒಯ್ದು ಮುಟ್ಟಿಸಬೇಕೆಂದು ಮಾಡಿದ ಈ ಪ್ರಯತ್ನಕ್ಕೆ ನಮ್ಮ ನಿರೀಕ್ಷೆಗೆ ಮೀರಿದ ಮೆಚ್ಚಿಕೆಯೂ, ಪ್ರೋತ್ಸಾಹವೂ ದೊರೆಯುತ್ತಿವೆ. ಜನರು ತಾವಾಗಿಯೇ ಮುಂದೆ ಬಂದು ತಮ್ಮ ತಮ್ಮ ಊರುಗಳಲ್ಲಿ ಈ ಉಪನ್ಯಾಸಮಾಲೆಗಳನ್ನು ಏರ್ಪಡಿಸಲು ವಿಶ್ವವಿದ್ಯಾಲಯಕ್ಕೆ ಬರೆದು ಬಿನ್ನವಿಸಿಕೊಳ್ಳುತ್ತಿರುವುದು ನಿಜವಾಗಿಯೂ ಸಂತೋಷದ ಸಂಗತಿಯಾಗಿದೆ.

ಈ ಜ್ಞಾನಪ್ರಸಾರ ಕಾರ್ಯದಲ್ಲಿ ಭಾಗವಹಿಸುವದರಿಂದ ವಿಶ್ವವಿದ್ಯಾಲಯದ ಹಾಗು ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕ ಒದಗುವದಲ್ಲದೆ ಎಂತಹ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗು ಅದನ್ನು ಸುಲಭ ಶೈಲಿಯಲ್ಲಿ ಬರವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನವಿಟ್ಟು ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ೨೪೧ ಪುಸ್ತಕಗಳು ಪ್ರಕಟ ವಾಗಿವೆ. ಅವು ಅಚ್ಚಾಗಿ ಹೊರಬಂದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಕ ಗಳು ನಾಲ್ಕು-ಐದು ಮುದ್ರಣಗಳನ್ನು ಕಂಡಿರುವುದು ಈ ಮಾಲೆಯ ಉಪಯುಕ್ತತೆಯನ್ನೂ, ಜನಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖ ಪ್ರಗತಿ ಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ

ಆರ್. ಸಿ. ಹಿರೇಮಠ
ಕುಲಪತಿಗಳು

ಲೇಖಕರ ಮಾತು

ನನ್ನ ಸ್ಮರಣೆಗಳು........

ಭಾರತದಲ್ಲಿ ಕುಟುಂಬ ಯೋಜನೆಯ ಯಶಸ್ಸು—ಸಾಧಿಸುವ ದಿಟ್ಟ ಹೆಜ್ಜೆಯು, ಜಗತ್ತಿನಲ್ಲಿ ಜನಸಂಖ್ಯಾ ವಿಸ್ಫೋಟವನ್ನು ಸಡಿಲಿಸುವದರಲ್ಲಿ ಮಹತ್ವದ ಪಾತ್ರವಹಿಸುತ್ತಿದೆ. ಜಟಿಲವಾಗಿರುವ ಜನಸಂಖ್ಯಾ ಸಮಸ್ಯೆಯನ್ನು ಬಗೆಹರಿಸುವ ಜ್ಞಾಪಕಾರ್ಥವಾಗಿ ೧೯೭೪ನೆಯ ವರ್ಷವನ್ನು 'ಜನಸಂಖ್ಯಾ ವರ್ಷ' ಎಂದು ಪ್ರಪಂಚದಾದ್ಯಂತ ವಿಶೇಷ ಮಹತ್ವದಿಂದ ಆಚರಿಸಲಾಯಿತು. ಭಾರತ ಸರಕಾರವು ಗ್ರಾಮಾಂತರಗಳಲ್ಲಿ, ನಗರಗಳಲ್ಲಿ ಕುಟುಂಬ ಯೋಜನೆಯ ಮಹತ್ಸಾಧನೆಯ ಜ್ಞಾನವನ್ನು ಜನಸಾಮಾನ್ಯರಿಗೆ ನೀಡುತ್ತಲಿದೆ. ಅದಕ್ಕಾಗಿ ನಮ್ಮೆಲ್ಲರ ಸಹಕಾರ ಬೇಕಾಗಿದೆ.

ಕರ್ನಾಟಕ ವಿಶ್ವವಿದ್ಯಾಲಯವು ಗ್ರಾಮಾಂತರಗಳಲ್ಲಿ, ನಗರಗಳಲ್ಲಿ ಸಮಯಾನುಸಾರವಾಗಿ ಜನಸಾಮಾನ್ಯರಿಗೆ ಸಾಹಿತ್ಯ, ಕಲೆ ಹಾಗೂ ವಿಜ್ಞಾನ ವಿಷಯಗಳ ಜ್ಞಾನವನ್ನು ನೀಡಲು ಉಪನ್ಯಾಸ ಶಿಬಿರಗಳನ್ನು ಏರ್ಪಡಿಸುತ್ತ ಯಶಸ್ವಿಯಾಗಿ ಸಾಗುತ್ತಲಿದೆ.

೧೬ನೇ ಶಿಬಿರವು ಬೀದರ ಜಿಲ್ಲೆಯ ಕಮಲನಗರದಲ್ಲಿ ನಡೆಯಿತು. ಪ್ರಸ್ತುತ ಶಿಬಿರದಲ್ಲಿ ನಾನು ಸಾದರ ಪಡಿಸಿದ 'ಭಾರತದಲ್ಲಿ ಕುಟುಂಬ ಯೋಜನೆಯ ಯಶಸ್ಸು' ಎಂಬ ನನ್ನ ಉಪನ್ಯಾಸಕ್ಕೆ ಪ್ರೋತ್ಸಾಹವನ್ನು ನೀಡಿದ ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಸಂಗವಿಸ್ತರಣ ವಿಭಾಗದ ನಿರ್ದೇಶಕರಾದ ಶ್ರೀ ಚೆನ್ನವೀರ ಕಣವಿ ಅವರಿಗೂ, ಉಪನಿರ್ದೇಶಕರಾದ ಶ್ರೀ ಎಸ್. ಬಿ. ನಾಯಕ ಅವರಿಗೂ ಮತ್ತು ಸಹಾಯಕ ನಿರ್ದೇಶಕರಾದ ಶ್ರೀ ಎಲ್. ಎಂ. ಗುಡ್ಡೀನ ಅವರಿಗೂ ನನ್ನ ಸ್ಮರಣೆಗಳು.

ಕನ್ನಡ ಭಾಷೆಯಲ್ಲಿ ಕುಟುಂಬ ಯೋಜನೆಯ ವಿಷಯದ ಬಗೆಗೆ ಪುಸ್ತಕಗಳು ವಿರಳ. ಈ ಕಿರುಹೊತ್ತಿಗೆ ಬೆಳಕಿಗೆ ಬರಲು ನನ್ನ ಮಿತ್ರರ ಸಹಕಾರವು ಚಿರಸ್ಮರಣೀಯವಾಗಿದೆ. ಪ್ರತಿಯೊಬ್ಬರ ದಾಂಪತ್ಯ ಜೀವನದಲ್ಲಿ ಈ ಕಿರುಹೊತ್ತಿಗೆಯು ದಿನಚರಿಯ ಜ್ಞಾನದೀಪವಾಗಲೆಂದು ಬಯಸುವೆನು.

ಬಿ. ಎಸ್. ನಂದ್ಯಾಳ

ಸಮಾಜಶಾಸ್ತ್ರ ವಿಭಾಗ
ಬಿ. ವ್ಹಿ. ಭೂಮರಡ್ಡಿ ಕಲಾ ಮತ್ತು
ವಿಜ್ಞಾನ ಮಹಾವಿದ್ಯಾಲಯ
ಬೀದರ

ಪರಿವಿಡಿ

೧. ಪೀಠಿಕೆ

ಭಾರತವು ಸ್ವಾತಂತ್ರ್ಯಗಳಿಸಿದ ಮೇಲೆ "ಸುಖೀರಾಜ್ಯ" ಅಥವಾ ಕಲ್ಯಾಣರಾಜ್ಯ (Welfare State) ದ ಸ್ಥಾಪನೆಗಾಗಿ ಸರ್ವತೋಮುಖ ಪ್ರಯತ್ನಗಳು ನಡೆದಿವೆ. ಆದರೆ ದಿನದಿಂದ ದಿನಕ್ಕೆ ಬೃಹದಾಕಾರವಾಗಿ ಬೆಳೆಯುತ್ತಿರುವ ಜನಸಂಖ್ಯೆಯ ಫಲವಾಗಿ ಅಭಿವೃದ್ಧಿ ಕಾರ್ಯಗಳ ಲಾಭವು ಜನತೆಗೆ ಸಾಕಷ್ಟು ಪ್ರಮಾಣದಲ್ಲಿ ದೊರೆಯುತ್ತಿಲ್ಲ. ಆದ್ದರಿಂದ ಬೆಳೆಯುತ್ತಿರುವ ಜನಸಂಖ್ಯೆಯು ಭಾರತದೇಶಕ್ಕೆ ಒಂದು ಜಟಿಲ ಸಮಸ್ಯೆಯಾಗಿದೆ.

೧೬೫೦ನೇ ಇಸ್ವಿಯಿಂದ ೧೭೫೦ ರ ವರೆಗೆ ಭಾರತದಲ್ಲಿ ಜನಸಂಖ್ಯೆಯ ಬೆಳವಣಿಗೆಯು ಪ್ರತಿ ವರ್ಷಕ್ಕೆ ೦.೩%ರಷ್ಟಿತ್ತು. ಕ್ರಮೇಣವಾಗಿ ೧೭೫೦ ರಿಂದ ೧೮೫೦ ನೇ ಇಸ್ವಿಯ ವರೆಗೆ ೦.೫% ರಷ್ಟು ಮತ್ತು ೧೮೫೦ನೇ ಇಸ್ವಿಯಿಂದ ೧೯೫೦ರ ವರೆಗೆ ೦.೮% ರಷ್ಟಾಯಿತು. ಆದರೆ ೧೯೫೦ ರಿಂದ ೧೯೬೦ ರ ವರೆಗೆ ಈ ಜನಸಂಖ್ಯಾ ಬೆಳವಣಿಗೆಯ ಪ್ರಮಾಣವು ೧.೬% ರಿಂದ ೧.೯% ರ ವರೆಗೂ ಏರಿತು. ಆದುದರಿಂದ ಭಾರತ ಸರಕಾರವು ತ್ವರಿತಗತಿಯು ಈ ಜನಸಂಖ್ಯಾ ಬೆಳವಣಿಗೆಯನ್ನು ಗಮನಿಸಿ ಕುಟುಂಬ ಯೋಜನೆಯನ್ನು ಪಂಚವಾರ್ಷಿಕ ಯೋಜನೆಯ ಒಂದು ಚಿಕ್ಕ ಭಾಗವಾಗಿ ೧೯೫೧ ರಲ್ಲಿ ಪ್ರಾರಂಭಿ

ಸಿತು. ೧೯೬೦ ರಿಂದ ೧೯೭೦ ರ ದಶಕದಲ್ಲಿ ಜನಸಂಖ್ಯಾ ಬೆಳವಣಿಗೆಯ ಪ್ರಮಾಣವು ಪ್ರತಿವರ್ಷ ೨.೫% ರಂತೆ ಇತ್ತು. ಈ ಏರಿಕೆ ಹೀಗೆಯೇ ಮುಂದುವರಿದರೆ ಕ್ರಿಸ್ತ ಶಕ ೨೦೦೦ ರಲ್ಲಿ ನಮ್ಮ ಜನಸಂಖ್ಯೆಯು ಒಂದು ಶತಕೋಟಿ (One Billion) ಯಾಗುತ್ತದೆ. ಅಂದರೆ ನಾವು ಇನ್ನೊಂದು ಭಾರತ ದೇಶವನ್ನೇ ನಿರ್ಮಾಣ ಮಾಡುತ್ತೇವೆಂದು ಅನಿಸುತ್ತದೆ. ಅದಕ್ಕಾಗಿ ನಾವು ಮುಂಜಾಗ್ರತೆ ವಹಿಸಿಕೊಂಡು ನಮ್ಮ ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಶಕ್ತಿಗಳನ್ನು ಬಲಪಡಿಸಿಕೊಂಡು ಈ ಸಮಸ್ಯೆಯನ್ನು ಬಗೆಹರಿಸಬೇಕಾಗಿದೆ.

ರಾಷ್ಟ್ರದ ಸರ್ವತೋಮುಖ ಬೆಳವಣಿಗೆಯಲ್ಲಿ ಕುಟುಂಬ ಯೋಜನೆಯು ಒಂದಾಗಿದೆ. ಭಾರತದ ಸಾಂಸ್ಕೃತಿಕ, ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಅಭಿವೃದ್ಧಿ ಸಾಧಿಸಲು ಕುಟುಂಬ ಯೋಜನೆಯೊಂದರಿಂದಲೇ ಸಾಧ್ಯವಿಲ್ಲ. ದೇಶದಲ್ಲಿರುವ ಜನಸಂಖ್ಯೆ, ಆಹಾರ, ದಾರಿದ್ರ್ಯ, ನಿರುದ್ಯೋಗ ಹಾಗೂ ನಿರಕ್ಷರತೆಯ ಸಮಸ್ಯೆಗಳ ನಿವಾರಣೆಗೆ ನಾವೆಲ್ಲರೂ ಹೊಣೆಗಾರರು. ಆದ್ದರಿಂದ ನಾವೆಲ್ಲರೂ ಸರಕಾರದ ಜೊತೆಗೆ ಸಹಕರಿಸಿ ಶಕ್ತಿಯುತ ಜನಾಂಗದ ನಿರ್ಮಾಣಕ್ಕಾಗಿ ಶ್ರಮಿಸಬೇಕಾಗಿದೆ. ಏಕೆಂದರೆ ನಮ್ಮ ರಾಜಕೀಯ ಸ್ವಾತಂತ್ರ್ಯಕ್ಕೆ ಒಳ್ಳೆಯ ಮಹತ್ವ ಬರಬೇಕಾದರೆ, ಆರ್ಥಿಕ, ಶೈಕ್ಷಣಿಕ ಮತ್ತು ಸಾಮಾಜಿಕ ಸ್ವಾತಂತ್ರ್ಯವು ನಮ್ಮೆಲ್ಲರಿಗೂ ದೊರೆಯಬೇಕು. ಅಂದಾಗಲೇ ಭಾರತವು 'ರಾಮರಾಜ್ಯ', 'ಗ್ರಾಮರಾಜ್ಯ', 'ಸುಖೀರಾಜ್ಯ', 'ಕಲ್ಯಾಣರಾಜ್ಯ' ಮತ್ತು 'ಸಮಾಜವಾದ

ಮಾದರಿಯ ರಾಜ್ಯ' ಎಂದು ಮುಂತಾಗಿ ಕರೆಯಿಸಿಕೊಳ್ಳ ಬಹುದು. ಆದ್ದರಿಂದ ಇಂಥ ಆದರ್ಶಗಳನ್ನು ಸಾಧಿಸಲು ಹಲವಾರು ಯೋಜನೆಗಳು ಬೇಕು. ಕುಟುಂಬ ಯೋಜನೆಯು ಇಂಥ ಹಲವಾರು ಯೋಜನೆಗಳಲ್ಲಿ ಅತಿ ಮುಖ್ಯವಾದ ಕಾರ್ಯ ಕ್ರಮವಾಗಿದೆ. ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವ ದರಲ್ಲಿ ಯಾವ ಪ್ರಯತ್ನಕ್ಕೂ ಮನ್ನಣೆಯಿದೆ, ಸ್ವಾಗತವಿದೆ. ಒಂದು ವೇಳೆ ಜನಸಂಖ್ಯೆಯು ನಿಯಂತ್ರಣದಲ್ಲಿ ಬರದೇ ಹೋದರೆ ನಮ್ಮ ಪ್ರಗತಿಯ ಪ್ರಯತ್ನಗಳೆಲ್ಲ ಉಸುಕಿನ ಮೇಲೆ ರಾಷ್ಟ್ರದ ಭವಿಷ್ಯ ಬರೆದಂತೆ ಆಗುತ್ತವೆ. ಹೀಗೆ ಮಳಲಿನ ಮೇಲೆ ಮೂಡಿಸಿದ ಗೆರೆಗಳನ್ನೆಲ್ಲ ಜನಸಂಖ್ಯಾ ತೆರೆಗಳು ಅಳಿಸಿಹಾಕು ತ್ತವೆ.

೨. 'ಕುಟುಂಬ ಯೋಜನೆ' ಎಂದರೇನು ?

ಕುಟುಂಬ ಯೋಜನೆ ಎಂದರೆ ಮಕ್ಕಳಾಗುವದನ್ನು ತಡೆಯುವದು ಮಾತ್ರವಲ್ಲದೆ ಇನ್ನೂ ಹೆಚ್ಚಿನ ಮಕ್ಕಳನ್ನು ಪಡೆಯುವ ಅವಧಿಯಲ್ಲಿ ಅನುಸರಿಸಬೇಕಾದ ಕೆಲ ನಿಯಮ ಗಳನ್ನು ಪಾಲಿಸುವದು, ಎಂದು ವಿಶಾಲ ಅರ್ಥದಲ್ಲಿ ಹೇಳ ಬಹುದು.

೧) ಎಷ್ಟು ಮಕ್ಕಳನ್ನು ತಾವು ಪಡೆಯಬೇಕು ಮತ್ತು ಯಾವಾಗ ಎಂಬುದನ್ನು ದಂಪತಿಗಳು ನಿರ್ಧರಿಸುವದು.

೨) ಗೃಹಿಣಿಯ ಆರೋಗ್ಯವನ್ನು ರಕ್ಷಿಸಿಕೊಳ್ಳುವದು.

೩) ಶಿಸುಗಳ ಲಾಲನೆ, ಪಾಲನೆ, ಮಕ್ಕಳ ಆರೋಗ್ಯ ಪ್ರೋಷಣೆ ಹಾಗು ಅವರ ಶಿಕ್ಷಣದ ಬಗ್ಗೆ ದಂಪತಿಗಳು ಲಕ್ಷ್ಯದಲ್ಲಿಡುವದು.

೪) ಚಿಂತೆ, ಭಯಗಳಿಲ್ಲದೆ ದಾಂಪತ್ಯ ಜೀವನದಲ್ಲಿ ಆನಂದವನ್ನು ಅನುಭವಿಸುವದು.

೫) ಸಂತತಿ ನಿಯಂತ್ರಣವು ಅನೈತಿಕವಲ್ಲ ಎಂದು ಸ್ಪಷ್ಟವಾಗಿ ತಿಳಿದುಕೊಳ್ಳುವದು.

ಅನಂತರ ಪ್ರಾಮುಖ್ಯವಾಗಿ ಬಂಜೆತನಕ್ಕೆ ಪರಿಹಾರಗಳನ್ನು ನೀಡುವದೂ ಕೂಡ ಕುಟುಂಬ ಯೋಜನೆಯಲ್ಲಿ ಸೇರಿದೆ. ಹೀಗೆ ಕುಟುಂಬ ಯೋಜನೆಯೆಂದರೆ ಜನನ ನಿಯಂತ್ರಣವು ಮಾತ್ರ ಅಲ್ಲ. ಅದು ಸುಖೀಕುಟುಂಬಕ್ಕಾಗಿ ರೂಪಿತವಾದ ಸಮಗ್ರಯೋಜನೆ ಎಂದು ತಿಳಿಯಬೇಕು.

ಒಂದೇ ಮಾತಿನಲ್ಲಿ ಹೇಳುವದಾದರೆ ಕುಟುಂಬಯೋಜನೆಯ ಉದ್ದೇಶವು ಮಕ್ಕಳನ್ನು ಅನಿರೀಕ್ಷಿತವಾಗಿ ಪಡೆಯುವದಲ್ಲ. ನಮ್ಮ ಮನಸ್ಸಿಗೆ ಒಪ್ಪಿತವಾದಂಥ ಮಕ್ಕಳನ್ನು ನಾವು ಬಯಸಿದಾಗ ಪಡೆಯುವದು ಅದರ ಗುರಿ. ಇಷ್ಟೇ ಅಲ್ಲ ದಂಪತಿಗಳಿಗೆ ಕುಟುಂಬಯೋಜನೆಯು ಅವರ ವೈವಾಹಿಕ ಜೀವನವಲ್ಲಿ ಸಾಮಾಜಿಕ ಹೊಣೆಗಾರಿಕೆಯ ಪಾಠವನ್ನು ಕಲಿಸಿಕೊಡುತ್ತದೆ. ತಾಯಿ ತಂದೆಗಳು ಸ್ವಾಸ್ಥ್ಯವನ್ನುಳಿಸಿಕೊಂಡು ಸದೃಢ ಹಾಗೂ

ಯೋಗ್ಯ ಮಕ್ಕಳನ್ನು ಪಡೆದು ಸುಖ ಸಂಸಾರ ಸಾಗಿಸುವ ಗುರಿ ಯೆಡೆಗೆ ಕುಟುಂಬ ಯೋಜನೆಯು ಮುನ್ನಡೆಸುತ್ತದೆ.

ಕುಟುಂಬ ಯೋಜನೆಗೆ ವೈಯುಕ್ತಿಕ ಕಾರಣ: ಸಂಸಾರದಲ್ಲಿ ನೆಮ್ಮದಿ ಇರಬೇಕಾದರೆ ಮಕ್ಕಳ ಸಂಖ್ಯೆಯು ಮಿತಿ ಮೀರಬಾರದೆಂಬುದು ಎಲ್ಲರ ಅನುಭವದ ವಿಚಾರವಾಗಿದೆ. ಭಾರತೀಯ ಸಂಸ್ಕೃತಿಯಲ್ಲಿ "ಅಷ್ಟೈಶ್ವರ್ಯ ಸಂಪತ್ತುಗಳಲ್ಲಿ ಸಂತಾನ ಭಾಗ್ಯವೂ ಒಂದು ಸಂಪತ್ತು" ಹಾಗೂ "ಅಪುತ್ರಸ್ಯ ಗತಿರ್ನಾಸ್ತಿ" ಎಂಬ ಆದರ್ಶಗಳು ಜನಮನಗಳಲ್ಲಿ ಬೇರೂರಿವೆ. ಹಿಂದೂ ಧರ್ಮದ ಪ್ರಕಾರ ಪಿತೃಋಣ ತೀರಿಸುವದಕ್ಕಾಗಿ, ಜೀವನದಲ್ಲಿ ಮುಕ್ತಿ ಪಡೆಯುವದಕ್ಕಾಗಿ ಧರ್ಮಪುತ್ರನನ್ನು ಅಥವಾ ಧರ್ಮ ಪುತ್ರಿಯನ್ನು ಪಡೆಯಬೇಕು ಎಂದು ಜನ ನಂಬುತ್ತಾರೆ. ಆದರೆ ಪಡೆದ ಮಕ್ಕಳಿಗೆ ಉಣ್ಣಲು ಯೋಗ್ಯ ಆಹಾರವು, ತೊಡಲು ತಕ್ಕ ಬಟ್ಟೆಬರೆಗಳು ದೊರೆಯಬೇಕು. ಅವರ ಪಾಲನೆ ಪೋಷಣೆಗಳಿಗೆ ತಾಯಿಯು ಸದೃಢಕಾಯಳೂ, ತಂದೆಯು ಅನುಕೂಲವುಳ್ಳವನೂ ಆಗಿರಬೇಕು. ಅದು ಇಲ್ಲವಾದರೆ ಕಿರಿಕಿರಿ ಮಾಡುವ ಮಕ್ಕಳು ತುಂಬಿದ ಮನೆಯು ಸಂತೆ ನೆರೆದ ಪೇಟೆಯಂತೆ ತೋರಬಹುದು. ಒಂದು ವೇಳೆ ಸಾಕಷ್ಟು ಹಣವಿದ್ದರೂ ಸಹ ಪ್ರತಿವರ್ಷವೂ ತಾಯಿಯು ಮಕ್ಕಳನ್ನು ಹೆರುತ್ತಿದ್ದರೆ ಆಕೆಯು ತನ್ನ ಆರೋಗ್ಯವನ್ನು ಸರಿಯಾಗಿ ಕಾಪಾಡಿಕೊಳ್ಳಲಾರಳು. ಮತ್ತು ಸಣ್ಣ ಸಣ್ಣ ಮಕ್ಕಳ ಯೋಗಕ್ಷೇಮವನ್ನು ನೋಡಿಕೊಳ್ಳಲು ಅಶಕ್ತಳಾಗುವಳು. ಅದರಂತೆ ತಂದೆಯೂ ಕೂಡ ಮಕ್ಕಳಿಗೆ ಯೋಗ್ಯರೀತಿಯ ಶಿಕ್ಷಣ, ತರಬೇತಿ ಮತ್ತು

ಉಡಿಗೆ ತೊಡಿಗೆಗಳನ್ನು ಒದಗಿಸಲು ಅಸಮರ್ಥನಾಗುವನು. ಅದಕ್ಕಾಗಿ ಚಿಕ್ಕ ಸಂಸಾರವೇ ಚೊಕ್ಕ ಸಂಸಾರ ಎಂಬ ಮಾತು ಸುಳ್ಳಲ್ಲ.

ಕುಟುಂಬ ಯೋಜನೆಗೆ ರಾಷ್ಟ್ರೀಯ ಕಾರಣ: ಮನೆಯು ವ್ಯಕ್ತಿಜೀವನದ ತೊಟ್ಟಿಲು. ವ್ಯಕ್ತಿತ್ವದ ವಿಕಾಸಕ್ಕೆ ಬೇಕಾದ ಎಲ್ಲ ಆಕರಗಳು ಇಲ್ಲಿ ಸಿಗುತ್ತವೆ. ವ್ಯಕ್ತಿಯು ಸದೃಢಕಾಯುದವನಾಗಿದ್ದರೆ ಕುಟುಂಬಕ್ಕೆ ಬಲ. ಕುಟುಂಬ ಬಲವಾಗಿದ್ದರೆ ರಾಷ್ಟ್ರಕ್ಕೆ ಭದ್ರತೆ. ಆರೋಗ್ಯವಂತ ವ್ಯಕ್ತಿ ಅಥವಾ ಕುಟುಂಬದಿಂದ ಮಾತ್ರ ಸಮಾಜಘಾತುಕ ಶಕ್ತಿಗಳ ಉಚ್ಚಾಟನೆಯಾಗಿ ರಾಷ್ಟ್ರನಿರ್ಮಾಣಕ್ಕೆ ಅವಕಾಶವಾಗುತ್ತದೆ. ಏಕೆಂದರೆ ದಿನದಿಂದ ದಿನಕ್ಕೆ ಹೆಚ್ಚುವ ಜನಸಂಖ್ಯೆಯಿಂದ ದೇಶದ ಪ್ರಗತಿಗೆ ಬಲು ಧಕ್ಕೆಯಾಗುವದು. ಅದಕ್ಕಾಗಿ ಸಂತಾನದ ಮಿತಿಯು ದೇಶಕ್ಕೆ ಹಿತವು ಎಂಬುದನ್ನು ದೇಶದ ಪ್ರತಿಯೊಬ್ಬ ನಾಗರಿಕನು ಮನಗಾಣಬೇಕು. ಹಾಗು ಕುಟುಂಬಯೋಜನೆಯು ರಾಷ್ಟ್ರೀಯ ಯೋಜನೆಗಳಲ್ಲಿ ಒಂದೆಂದು ಬಗೆದು ಸಹಕರಿಸಬೇಕು.

ಕುಟುಂಬಯೋಜನೆಗೆ ಅಂತರರಾಷ್ಟ್ರೀಯ ಕಾರಣ: ವಿಶ್ವಶಾಂತಿಯ ದೃಷ್ಟಿಯಿಂದಲೂ ಜನಸಂಖ್ಯಾನಿಯಂತ್ರಣವು ಅಗತ್ಯವಾಗಿದೆ. ಹಿಂದಕ್ಕೆ ಜಪಾನ ದೇಶದ ಅಪರಿಮಿತವಾದ ಜನಸಂಖ್ಯೆಯು ಚೀನಾದ ಮೇಲೆ ಯುದ್ಧ ಸಾರಲು ಕಾರಣ ವಾಯ್ತು. ಹಾಗೆಯೇ ಜರ್ಮನಿ, ಇಟಲಿ ಮತ್ತಿತರ ರಾಷ್ಟ್ರಗಳು ಹೊಟ್ಟೆಹೊರಲು ತಾಯಂದಿರನ್ನು ಆದಷ್ಟು ಹೆಚ್ಚು ಮಕ್ಕಳನ್ನು

ಹೆರುವಂತೆ ಪ್ರೋತ್ಸಾಹಿಸಿದವು. ಬಳಿಕ ಆ ಜನರನ್ನು ಸೈನ್ಯಕ್ಕೆ ಸೇರ್ಪಡೆ ಮಾಡಿಕೊಂಡು ತಮ್ಮ ಆಕ್ರಮಣಗಳನ್ನು ಮುಂದು ವರಿಸಿದವು. ಹೀಗೆಯೇ ದ್ವಿತೀಯ ಜಾಗತಿಕ ಯುದ್ಧಕ್ಕೆ (World War II) ಮಿತಿಮೀರಿ ಏರುತ್ತಿದ್ದ ಜನಸಂಖ್ಯೆಯು ಒಂದು ಕಾರಣವಾಯಿತು.

ಇತ್ತೀಚಿನ ಅಂಕಿ ಸಂಖ್ಯೆಯಿಂದ ತಿಳಿದುಬರುವದೇನಂದರೆ ಪ್ರತಿದಿನವೂ ೮೦,೦೦೦ (ಎಂಬತ್ತು ಸಾವಿರ) ಹೊಸ ಬಾಯಿಗಳು ಅನ್ನಕ್ಕಾಗಿ ಬೇಡಿಕೆಯನ್ನು ಮುಂದೊಡುತ್ತಿವೆ. ಆದರೆ ಭೂಮಿಯು ಇದ್ದ ಗಾತ್ರದಲ್ಲಿ ಇದೆ ಮತ್ತು ಅಷ್ಟೇ ಪ್ರಮಾಣ ದಲ್ಲಿ ಹೆಚ್ಚುವರಿ ಬೆಳೆಯನ್ನು ಕೊಡಲಾರದು ಹೀಗಾಗಿ ಇನ್ನು ಸಾಮಾನ್ಯವಾಗಿ ನೂರು ವರ್ಷಗಳಲ್ಲಿ ಪ್ರಪಂಚದ ಈಗಿನ (250 Billion people) ೨೫೦ ಶತಕೋಟಿಯಲ್ಲಿರುವ ಜನ ಸಂಖ್ಯೆಯು ಇಮ್ಮಡಿಯಾಗುವ ಸಂಭವವಿದೆ. ನಿರಾಶಾವಾದಿಗಳ ದೃಷ್ಟಿಯಂತೆ (World war III) ಮೂರನೆಯ ಜಾಗತಿಕ ಮಹಾಯುದ್ಧ ನಡೆದು ಕೋಟಿಗಟ್ಟಲೆ ಜನರು ಸಾವನ್ನು ಅಪ್ಪ ದಿದ್ದರೆ ಇನ್ನು ಎರಡು ಮೂರು ಶತಮಾನಗಳಲ್ಲಿ ಈ ಪ್ರಪಂಚವೇ ಜನರಿಗೆ ಸಾಕಾಗದೇ ಹೋಗಬಹುದು ಆದುದರಿಂದ ವಿಶ್ವ ಶಾಂತಿಯ ಏಳಿಗೆಗಾಗಿ, ಮಾನವಕುಲಕೋಟಿಯ ಕಲ್ಯಾಣಕ್ಕಾಗಿ ಬೆಳೆಯುತ್ತಿರುವ ಜನಸಂಖ್ಯೆಯನ್ನು ಮಿತಿಯಲ್ಲಿ ತರುವದು ಅಗತ್ಯವಾಗಿದೆ. ಅದಕ್ಕಾಗಿ ಕುಟುಂಬಯೋಜನೆ ಬೇಕೇಬೇಕು ಎಂದಂತಾಯಿತು. ವಿಶ್ವಸಂಸ್ಥೆಯ ಮಾನವೀಯ ಹಕ್ಕುಗಳ ಸಮಿತಿಯ ಅಂದಾಜಿನ ಪ್ರಕಾರ ವಿಶ್ವದ ಸುಮಾರು ೩೭೦

ಕೋಟಿ ಜನರಲ್ಲಿ ಒಂದುನೂರು ಕೋಟಿ ಜನರು ಕಡುಬಡತನದ ಜೀವನ ಸಾಗಿಸುತ್ತಿದ್ದಾರೆ. ಏಷ್ಯಾ, ಆಫ್ರಿಕಾ, ಲ್ಯಾಟಿನ್ ಅಮೇರಿಕಾದಲ್ಲಿ ವಾಸವಾಗಿರುವ ೨೦೦ಕೋಟಿ ಜನರಲ್ಲಿ ಮೂರ ನೆಯ ಒಂದು ಭಾಗ ಜನರು ಹಸಿವೆಯಿಂದ ಬಳಲುತ್ತಿದ್ದಾರೆ. ಪೌಷ್ಟಿಕ ಆಹಾರದ ಅಭಾವದಿಂದ ಕೊರಗುತ್ತಿದ್ದಾರೆ. ಇವರು ಇತರ ಅಭಿವೃದ್ಧಿಹೊಂದಿದ ರಾಷ್ಟ್ರಗಳ ಜನರಿಗಿಂತಲೂ ೨೦ ವರ್ಷ ಕಡಿಮೆ ಬದುಕುತ್ತಾರೆ. ೨೦% ರಷ್ಟು ಶಿಶುಗಳ ಮರಣ ಪ್ರಮಾಣವಿದೆ. ಮತ್ತು ೮೦% ಜನರು ಅವಿದ್ಯಾ ವಂತರಿದ್ದಾರೆ. ಇಲ್ಲಿ ಬಡತನ ಒಂದು ಭೂತಾಕಾರದ ಸಮಸ್ಯೆಯಾಗಿದೆ. ಇದರ ನಿವಾರಣೆಗೆ ತುರ್ತುಕ್ರಮ ಅಗತ್ಯ. ಜಾತಿ, ಮತ ಮತ್ತು ಲಿಂಗಭೇದಗಳನ್ನು ತೊಡೆದುಹಾಕಿ ಸರ ಕಾರವು ಎಲ್ಲರಿಗೂ ಸಮಾನ ಉದ್ಯೋಗ ಅವಕಾಶಗಳನ್ನು ಕೊಡಬೇಕು ಹಾಗು ವೈದ್ಯಕೀಯ ಅಭ್ಯಾಸವನ್ನು ನೀಡಬೇಕು. ಎಲ್ಲರಿಗೂ ಕುಟುಂಬ ಯೋಜನೆಯ ಅಗತ್ಯವನ್ನು ಕುರಿತು ಮನವರಿಕೆ ಮಾಡಿಕೊಡಬೇಕು.

೩. ಕುಟುಂಬ ಯೋಜನೆಯ ಸಾಧನಗಳು

ಯಾವ ಉದ್ದೇಶಗಳಿಗಾಗಿ ಸಂತತಿ ನಿರೋಧಕ ಸಾಧನ ಗಳನ್ನು ಅಳವಡಿಸಿಕೊಳ್ಳಬೇಕೆಂಬುದನ್ನು ಯಾರಾದರೂ ಸಹಜ ವಾಗಿ ಕೇಳಬಹುದು. ಕೆಲಜನ ಸತಿಪತಿಗಳು ಎರಡು ಮಕ್ಕಳ

ಜನನದ ಮಧ್ಯದಲ್ಲಿ ಅಂತರವನ್ನು ಲಕ್ಷ್ಯದಲ್ಲಿರಿಸಿ ಗರ್ಭನಿರೋಧಕ ಸಾಧನಗಳನ್ನು ಉಪಯೋಗಿಸುತ್ತಾರೆ. ಇಂಥವರು ಮಿತ ಸಂತಾನದ ಬಗ್ಗೆ ಚಿಂತಿಸುವುದಿಲ್ಲ. ಇನ್ನು ಕೆಲವರು ಪತ್ನಿಯ ಸೂಕ್ಷ್ಮ ಪ್ರಕೃತಿಯನ್ನು ಗಮನದಲ್ಲಿರಿಸಿಯೋ, ಮೊದಲಿನ ಹೆರಿಗೆಯಲ್ಲಿ ಅನುಭವಿಸಿದ ಯಾತನೆಗಳ ಕಟು ಅನುಭವದಿಂದಾಗಿಯೋ ಅಥವಾ ಪತ್ನಿಯು ಆಕಸ್ಮಿಕವಾಗಿ ಅಂಗವಿಕಲ ಹಾಗೂ ಉನ್ಮಾದ ಮಕ್ಕಳನ್ನು ಹೆತ್ತಿದ್ದಕ್ಕಾಗಿ ಸಂತಾನನಿರೋಧಕಗಳನ್ನು ಉಪಯೋಗಿಸುವರು. ಇಂಥವರಲ್ಲಿ ಆರ್ಥಿಕ ದುರವಸ್ಥೆಯೂ ಕಾರಣವಾಗಿರಬಹುದು. ಕೆಲ ದಂಪತಿಗಳು ಭಾವನಾತ್ಮಕವಾಗಿ ಪರಿವಾರಯೋಜನೆಯ ಮಹತ್ವವನ್ನು ತಿಳಿದುಕೊಂಡು ಗರ್ಭನಿರೋಧಕ ಸಾಧನಗಳನ್ನು ಉಪಯೋಗಿಸುತ್ತಾ ಮಕ್ಕಳ ಮೇಲಿನ ಮಮತೆಯನ್ನು ಹೆಚ್ಚಿಸಿಕೊಂಡು ಚಿಕ್ಕದಾದ ಚೊಕ್ಕ ಸಂಸಾರವನ್ನು ಸುಖಮಯವಾಗಿ ಸಾಗಿಸುತ್ತಿದ್ದಾರೆ.

ಇನ್ನೊಂದು ಮಹತ್ವದ ವಿಷಯವನ್ನು ದಂಪತಿಗಳು ಜ್ಞಾಪಕದಲ್ಲಿಟ್ಟುಕೊಳ್ಳಬೇಕಾಗಿದೆ. ಅದಾವುದೆಂದರೆ ಯಾವ ಗರ್ಭನಿರೋಧಕಗಳೇ ಆಗಿರಲಿ ಪತಿಪತ್ನಿಯರು ಅವನ್ನು ಒಮ್ಮತದಿಂದ ಸ್ವೀಕಾರ ಮಾಡಿಕೊಂಡಿರಬೇಕು; ಏಕೆಂದರೆ ಈ ಸಾಧನಗಳಿಂದ ದಂಪತಿಗಳಲ್ಲಿ ತಿರಸ್ಕಾರ, ವೈಮನಸ್ಸು, ಅಸಹನೆ, ಅಸಹ್ಯತೆ ಭಾವನೆಗಳಿಗೆ ಎಡೆಗೊಡದೆ ಒಲುವು, ನಿಲುವುಗಳಿಗೆ ಪ್ರೋತ್ಸಾಹ ದೊರೆಯುವದು.

ಒಂದೇ ಸಾಧನದಿಂದ ಕುಟುಂಬಯೋಜನೆಯು ಫಲಕಾರಿಯಾಗಲಾರದು. ಕನಿಷ್ಠ ಎರಡೆರಡು ಗರ್ಭನಿರೋಧಕ ಸಾಧನ

ಗಳ ಬಗ್ಗೆ ದಂಪತಿಗಳು ತಿಳಿದುಕೊಂಡು ಉಪಯೋಗಿಸುತ್ತಿರ ಬೇಕಾಗುವದು. ಏಕೆಂದರೆ ಒಂದು ಸಾಧನವು ಪತ್ನಿಯ ಹಿಡಿತದಲ್ಲಿದ್ದರೆ, ಬೇರೊಂದು ಸಾಧನವು ಪತಿಯ ಹಿಡಿತವಲ್ಲಿರ ಬೇಕು. ಉದಾಹರಣೆಗಾಗಿ : ಪತಿಯು ನಿರೋಧ, ಜೆಲ್ಲಿ ಉಪ ಯೋಗಿಸುವಾಗ ಪತ್ನಿಯು ಬೇರೊಂದು ಸಾಧನ ರೂಪದಲ್ಲಿ ಅಂದರೆ ಪೆಸರಿ, ಡಯಾಫ್ರಂ, ಹತ್ತಿವಡೆ, ಕ್ರೀಂ (ಮಲಾಮು) ಇಲ್ಲವೆ ರಾಸಾಯನಿಕ ಗುಳಿಗೆಗಳ ಉಪಯೋಗ ಅರಿತುಕೊಂಡಿರ ಬೇಕು ಒಂದು ಪಕ್ಷಕ್ಕೆ ಪತಿಯು ತನ್ನ ಆಲಸ್ಯತನದಿಂದ ಗರ್ಭನಿರೋಧಕ ಸಾಧನಗಳು ನಿರರ್ಥಕವೆಂದು ತಿಳಿದಾಗ ಪತ್ನಿಯು ತನ್ನ ಪರಿಣಾಮಕಾರಿಯಾದ ಗರ್ಭನಿರೋಧಕ ಸಾಧನಗಳನ್ನು ಬಳಸಿಕೊಳ್ಳುವಳು ಪ್ರತಿಯಾಗಿ ಪತ್ನಿಯು ಯಾವದೇ ಕಾರಣದಿಂದ ಗರ್ಭನಿರೋಧಕ ಸಾಧನಗಳಿಗೆ ಅಸಮರ್ಥಳಾದಾಗ ಮತ್ತು ಬೇಸರಿಕೆ ತೋರಿದಾಗ ಪತಿಯು ತನಗೆ ಇಷ್ಟವಾದ ಗರ್ಭನಿರೋಧಕವನ್ನು ಸಾಧನವನ್ನಾಗಿ ಬಳ ಸುವದು ಪ್ರಯೋಜನಕಾರಿಯಾಗುವದು. ಇನ್ನೊಂದು ಪಕ್ಷಕ್ಕೆ ಪತಿಯು ತನಗೆ ಇಷ್ಟವಾದ ಗರ್ಭನಿರೋಧಕ ಸಾಧನವನ್ನು ಬಳಸುವದು ಸತಿಯ ಮನಸ್ಸಿಗೆ ಒಪ್ಪಲಾರದುದೂ ಇರಬಹುದು. ಇಲ್ಲವೆ ಒಪ್ಪಿಗೆಯಾಗಿದುದೂ ಇರಬಹುದು. ಈ ಸಂಗತಿ ಯನ್ನು ಪತಿಯು ಲಕ್ಷ್ಯದಲ್ಲಿ ತಂದುಕೊಳ್ಳುವದಿಲ್ಲ. ಇದರ ಫಲವಾಗಿ ದಂಪತಿಗಳೀರ್ವರಲ್ಲಿ ಸಮಾಗಮದ ಸೌಖ್ಯ ಸಿಗುವ ದಿಲ್ಲ. ಅದಕ್ಕಾಗಿ ದಂಪತಿಗಳು ತಮ್ಮ ಹಿತಾಸಕ್ತಿಗಳಿಗೆ ಅನು ಗುಣವಾಗುವ ಗರ್ಭನಿರೋಧಕ ಸಾಧನಗಳ ಉಪಯೋಗ

ಮಾಡಿಕೊಳ್ಳುವದು ಹಿತಕರವು. ಮೇಲಾಗಿ ಸ್ತ್ರೀಯರು ಮಹಿಳಾ ವೈದ್ಯರ ಬಳಿಗೆ ಹೋಗಿ ಪರೀಕ್ಷಿಸಿಕೊಂಡು ಕುಟುಂಬಯೋಜನೆಯ ಸಾಧನಗಳನ್ನು ಆರಿಸಿಕೊಳ್ಳುವದು ಒಳ್ಳೆಯದು. ಏಕೆಂದರೆ ನವ ವಧುವಿಗೆ ಕೊಡುವ ಮಹಿಳಾ ವೈದ್ಯರ ಸಲಹೆಗಳು ಮತ್ತು ಒಂದು ಕುಟುಂಬದ ತಾಯಿ ಕೊಡುವ ಸಲಹೆಗಳಲ್ಲಿ ಬಹಳ ಅಂತರವಿರುವದು. ಶಾರೀರಿಕ ದೃಷ್ಟಿಯಿಂದ, ಬಡವ ಹಾಗೂ ಕೂಲಿಕಾರರಿಗೆ ಪೇಟೆಯಲ್ಲಿ ದೊರೆಯುವ ಗರ್ಭ ನಿರೋಧಕ ಸಾಧನಗಳು (ಪೆಸರಿ, ಜೆಲ್ಲಿ, ಕ್ರೀಂ ಮತ್ತು ರಾಸಾಯನಿಕ ಗುಳಿಗೆ) ತುಟ್ಟಿಯಾಗಿರುವವು. ಆದ್ದರಿಂದ ಅವರು ಇತರ ಖರ್ಚಿನಲ್ಲಿ ಕಡಿತ ಮಾಡಿಕೊಂಡು ಅವುಗಳನ್ನು ಬೆಲೆತೆತ್ತು ತರುವದು ಕಷ್ಟಕರ ಕೆಲಸವೆನಿಸುವದು. ಇದನ್ನು ಗಮನಿಸಿ ನಮ್ಮ ಸರಕಾರವು ಜನಸಾಮಾನ್ಯರಿಗೆ ಸಹಜವಾಗಿ, ಸರಳ ಹಾಗೂ ಕಡಿಮೆ ಬೆಲೆಯಲ್ಲಿ ದೊರೆಯುವ ಸೌಲಭ್ಯಗಳನ್ನುಂಟು ಮಾಡುತ್ತಿದೆ.

ಹಾಗಾದರೆ ಕುಟುಂಬ ನಿಯಂತ್ರಣ ಸಾಧನಗಳ ಉಪಯೋಗದ ಹೊಣೆಗಾರಿಕೆಯನ್ನು ಪತಿಯು ಹೊರಬೇಕೇ? ಅಥವಾ ಪತ್ನಿಗೆ ಬಿಟ್ಟುಕೊಡಬೇಕೆ ಎನ್ನುವ ಪ್ರಶ್ನೆ ಸಹಜವಾಗಿ ಉದ್ಭವಿಸುವದು. ಇದೊಂದು ವಿಚಾರ ಪೂರ್ಣ, ಹಾಗು ಸೂಕ್ತ ಪ್ರಶ್ನೆಯಾಗಿದೆ. ಇದಕ್ಕೆ ಸಮರ್ಪಕ ಉತ್ತರವೇನಂದರೆ ಪತಿಪತ್ನಿಯರು ಸರಿಸಮಾನವಾಗಿ ಹೊಣೆಗಾರರು. ಆದರೆ ಎಷ್ಟೋ ವೇಳೆಗಳಲ್ಲಿ ಪತಿಪತ್ನಿಯರು ತಮ್ಮ ಹೊಣೆಗಾರಿಕೆಯನ್ನು ಮರೆಯುವ ಪ್ರಸಂಗ ಬರುತ್ತದೆ. ನವ ವಧುವರರಿಗೆ

ಲಗ್ನವಾದ ಎರಡು ಮೂರು ವರ್ಷಗಳ ಕಾಲ ಮಕ್ಕಳೇ ಬೇಡ ವೆಂದು ಕುಟುಂಬಯೋಜನೆಯ ಸಾಧನಗಳ ಉಪಯೋಗವನ್ನು ತಿಳಿದುಕೊಳ್ಳಲು ಹವಣಿಸುತ್ತಾರೆ. ಇಂಥ ಪರಿಸ್ಥಿತಿಯಲ್ಲಿ ಯೋಗ್ಯ ಸಲಹೆ ಕೊಡುವದು ಬಹಳ ಕಷ್ಟಕರವಾದದ್ದಾಗಿದೆ.

ಪ್ರತಿಯೊಂದು ಮಗುವಿಗೆ ಮೊದಲ ಐದು ವರ್ಷಗಳ ಕಾಲ ವಿಶೇಷ ಆರೈಕೆ ಮತ್ತು ಪೌಷ್ಟಿಕ ಆಹಾರ ದೊರೆಯ ಬೇಕು. ಇದಿಲ್ಲದೆ ಹೋದರೆ ಮಕ್ಕಳು ದೈಹಿಕವಾಗಿ ಮಾನಸಿಕ ವಾಗಿ ಬೆಳವಣಿಗೆ ಹೊಂದದೆ ಎಂದೆಂದಿಗೂ ಬಡಕಲಾಗಿ ಉಳಿ ಯುತ್ತವೆ. ಅದಕ್ಕಾಗಿ ಸತಿಪತಿಗಳು ಅತ್ಯಂತ ಸುಲಭವಾದ "ಸುರಕ್ಷಿತಕಾಲ ಪದ್ಧತಿ" **Safe period method** ರೂಢಿಸಿ ಕೊಳ್ಳುವದು ಒಳಿತು. ಈ ಸುರಕ್ಷಿತಕಾಲ ಪದ್ಧತಿಯನ್ನು ಮೊಟ್ಟಮೊದಲಿಗೆ ಕಂಡುಹಿಡಿದವರು– ಅಬ್ರಹಾಮ್ ಸ್ಟೋನ್ **(Abram Stone)** ಅಮೇರಿಕೆಯಲ್ಲಿ ಈ ಪದ್ಧತಿಗೆ **O. K. Method** ಎಂತಲೂ ಕರೆಯುತ್ತಾರೆ. ಈ ಪದ್ಧತಿಯ ಮೇರೆಗೆ ದಂಪತಿಗಳು ಕೆಲವು ನಿಶ್ಚಿತವಾದ ದಿನಗಳಲ್ಲಿ ಸಮಾಗಮ ಹೊಂದುವದು. ಹೆಚ್ಚೆಂದರೆ ಎಂಟು ವರ್ಷಕ್ಕೆ ಒಂದು ಅನ ಪೇಕ್ಷಿತ ಮಗು ಪಡೆಯಬಹುದೆಂದು ಊಹಿಸಿದ್ದಾರೆ. ಅದೂ ಮಾಸಿಕ ಚಕ್ರದಲ್ಲಿ ವ್ಯತ್ಯಾಸವಾದಾಗ, ಆಕಸ್ಮಿಕವಾಗಿ ಹವಾ ಮಾನ ಮತ್ತು ಆಹಾರ ಸೇವನೆಯಲ್ಲಿಯೋ ಅಥವಾ ಮತ್ತಿತರ ಬೇರೆ ಕಾರಣಗಳಿಂದಾಗಿಯೋ ಹಾರ್ಮೋನು ಕೊರತೆ ಯಿಂದಾಗಿ ಅನಪೇಕ್ಷಿತ ಮಗುವನ್ನು ಪಡೆಯುವರು. ಹೀಗಾ ದಾಗ ಸ್ತ್ರೀಯರು ಮಹಿಳಾ ವೈದ್ಯರ ಸಲಹೆಗಳನ್ನು ಪಡೆಯ

ಬೇಕಾಗುತ್ತದೆ. ಇದೊಂದು ಸರಳ ಹಾಗೂ ದಂಪತಿಗಳಿಗೆ ಇಷ್ಟವಾದ ಸಾಧನವಾಗಿದೆ. ಭಾರತದ ಅಸಂಖ್ಯಾತ ಬಡವರಿಗೆ ಹಾಗೂ ಅಶಿಕ್ಷಿತರಿಗೆ ಕುಟುಂಬ ಯೋಜನೆಯ ಆವಶ್ಯಕತೆಯನ್ನು ತಿಳಿಸಿಹೇಳಬೇಕು. ಈ ಸುರಕ್ಷಿತ ಕಾಲ ಪದ್ಧತಿಯು ಅವರಿಗೆ ಸುಲಭೋಪಾಯವಾಗಿದೆ. ಭಾರತ ಸರಕಾರದ ಕರೆಯ ಮೇರೆಗೆ ಅಮೇರಿಕೆಯ ಜಾಗತಿಕ ಸ್ವಾಸ್ಥ್ಯ ಸಂಸ್ಥೆ (WHO) ಯ ಪರವಾಗಿ ಡಾಕ್ಟರ ಅಬ್ರಹಾಮ್ ಸ್ಟೋನರು ಸಲ್ಲಿಸಿದ ಸೇವೆಯು ಶ್ಲಾಘನೀಯವಾಗಿದೆ. ಈ ಪ್ರಯೋಗಕ್ಕೆ ಸುರಕ್ಷಿತ ಸರಮಣಿಗಳ ಉಪಯೋಗವು ೧೯೫೦ನೇ ಇಸ್ವಿಯಲ್ಲಿ ಭಾರತದ ಮುಖ್ಯ ಕೇಂದ್ರ ನಗರಗಳಾದ ನ್ಯೂದೆಹಲಿ, ಮೈಸೂರು, ಪಶ್ಚಿಮ ಬಂಗಾಲಗಳಲ್ಲಿ ಪ್ರಯೋಗ ನಡೆಸಲಾಯಿತು. ಈ ಸರಮಣಿಯು "೩೮" ರಿಂದ ಕೂಡಿದ್ದು ವರ್ಣರಂಜಿತವಾಗಿ ಸ್ತ್ರೀಯರ ಕೊರಳಿಗೆ ಶೋಭಿಸುವಂತೆ ತ್ರಿವರ್ಣಗಳಲ್ಲಿ ರಚಿಸಿ ಪುಕ್ಕಟೆಯಾಗಿ ಹಂಚಲಾಯಿತು. ಈ ಮಾಲೆಯಲ್ಲಿ ಮೊದಲಿನ ಕಿತ್ತಳೆ ವರ್ಣದ ಮಣಿಗಳು ರಜೋದಿನದ ಅವಧಿ ಮತ್ತು ಎರಡನೆಯ ಹಸಿರು ವರ್ಣದ ಮಣಿಗಳು ಸಂಭೋಗಕ್ಕೆ ಸುರಕ್ಷಿತ ಕಾಲವನ್ನು ಸೂಚಿಸುವವು ಹಾಗು ಮೂರನೆಯ ಕೆಂಪು ವರ್ಣದ ಮಣಿಗಳು "ಗರ್ಭಸಂಭವ ಕಾಲ" ಅಥವಾ Baby-days ಮಗುದಿನಗಳೆಂದು ಸೂಚಿಸಲ್ಪಡುತ್ತಿದ್ದವು. ಈ ಮಾಲೆಯನ್ನು ಸ್ತ್ರೀಯರು ಧರಿಸಿಕೊಂಡು ಪ್ರತಿ ರಾತ್ರಿ ಸಂಭೋಗ ಪೂರ್ವ ಪ್ರತಿದಿನಕ್ಕೊಂದರಂತೆ ಸ್ಥಾನಪಲ್ಲಟ ಮಾಡಲು ತಿಳಿಸಿಕೊಡಲಾಯಿತು. ಒಂದೇ ವಾರದಲ್ಲಿ ಈ ಸರಮಣಿಯ ಬಗ್ಗೆ ಸರಿಯಾಗಿ ತಿಳುವಳಿಕೆ ಇಲ್ಲ.

ಮವರಿಂದ ಕೆಲವರಿಗೆ ಅಡೆತಡೆಗಳು ಅನುಭವಕ್ಕೆ ಬಂದವು ಅಂಥ ಮಹಿಳೆಯರ ಸಲಹೆಯ ಮೇರೆಗೆ- ದುಂಡುಮಣಿಗಳ ಆಕಾರ ಹಾಗೂ ವರ್ಣಗಳ ಬದಲಾವಣೆ ಮಾಡಲಾಯಿತು. ಏಕೆಂದರೆ ಮಧ್ಯರಾತ್ರಿಯಲ್ಲಿ ಮಣಿಗಳ ಆಕಾರ ಗುರುತು ಮಾಡಿಕೊಳ್ಳಲು— ವರ್ಣಭೇದ ಕಂಡುಕೊಳ್ಳಲು ಸುಲಭ ಮತ್ತು ಸ್ಪಷ್ಟವಾಗಿ ಕಾಣುವಂತೆ ರೂಪಾಂತರಿಸಲಾಯಿತು ಭಾವೋದ್ರೇಕ ಮತ್ತು ಅಲಕ್ಷ್ಯತನ ದೂರುಮಾಡುವದಕ್ಕಾಗಿ ಹಸಿರು ಬಣ್ಣದ ಮಣಿಗಳನ್ನೂ ಚಚ್ಚೌಕಾಕಾರವಾಗಿ ಕಲ್ಪಿಸ ಲಾಯಿತು. ಈ ವಿಧಾನದಿಂದ ಮೊದಲಿಗೆ ಬಹಳ ಪ್ರೋತ್ಸಾಹ ಸಿಕ್ಕಿತು. ಏಕೆಂದರೆ ಈ ಸರಮಣಿಯು ಕಂಠಾಭರಣವಾಗಿ ಶೋಭಿಸುವ, ಯಾವದೇ ಸಂಸ್ಕೃತಿ, ಸಂಪ್ರದಾಯ ಹಾಗೂ ಕಟ್ಟಳೆಗಳಿಗೆ ಭಾದಕವಾಗಲಾರದಂತಿದ್ದಿತು. ಆದ್ದರಿಂದ ಭಾರತ ಸರಕಾರವು ಕುಟುಂಬ ಯೋಜನೆಯ ಅಂಗವಾಗಿ ಪುಕ್ಕಟೆಯಾಗಿ ಅತಿ ಕಡಿಮೆ ವೆಚ್ಚವೆನಿಸಿದ ಆ ಸುರಕ್ಷಿತ ಕಾಲವನ್ನು ಸೂಚಿ ಸುವ ಸರಮಣಿಯ ಪ್ರಚಾರ ಭರದಿಂದ ಸಾಗಿತು. ಅಷ್ಟೇ ವಿಧವಲ್ಲಿ ಅನೇಕ ನ್ಯೂನತೆಗಳನ್ನೂ ಕೂಡ ಎದುರಿಸಬೇಕಾಗಿ ಬಂತು. ಏಕೆಂದರೆ ಗ್ರಾಮಾಂತರ ಪ್ರದೇಶದ ಮಹಿಳೆಯರು ಈ ಸರಮಣಿಯ ಕಂಠಾಭರಣವು ಅಪಹಾಸ್ಯಕ್ಕೆ ಎಡೆಮಾಡಿತು. ಅಷ್ಟೇ ಅಲ್ಲ ಜನನ ಪ್ರಮಾಣ ತಗ್ಗಿಸುವಲ್ಲಿ ಗಣನೀಯವಾಗಿ ಅಯಶಸ್ವಿಯಾಯಿತು. ಅತಿಶಯೋಕ್ತಿಯಾಗಿ ಈ ವಿಧಾನ ಸ್ವಯಂ ನಿಷ್ಠೆಗೆ ಧಕ್ಕೆ ಹಾಗೂ ವೈಜ್ಞಾನಿಕವಾಗಿ ಅಜಾಗ ರೂಕತೆ ಕಂಡುಬಂದುದರಿಂದ ಪ್ರತಿ ಆರು ಮಹಿಳೆಯರಲ್ಲಿ ಒಬ್ಬ ಮಹಿಳೆ ಮಾತ್ರ ಈ ವಿಧಾನಕ್ಕೆ ಅಂಟಿಕೊಳ್ಳುವ ನಿದರ್ಶನ

ದಿಂದಾಗಿ ನಿಷ್ಪ್ರಯೋಜನಕಾರಿಯಾಯಿತು. ತತ್ಫಲವಾಗಿ ಕುಟುಂಬ ಯೋಜನೆಯು ಬೇರೆ ವಿಧಾನ ಸಾಧನಗಳನ್ನು ಹುಡುಕಬೇಕಾಗಿ ಬಂದಿತು. ದಂಪತಿಗಳೀರ್ವರ ಸಹಕಾರ ಹೊಂದಿದ ಸುಲಭ ಸಾಧನವಾದ "ಸುರಕ್ಷಿತ ಕಾಲ" ಪದ್ಧತಿಯನ್ನು ಪ್ರಚಾರದಲ್ಲಿ ತರಲಾಯಿತು. ಸುರಕ್ಷಿತ ಕಾಲ ಪದ್ಧತಿಯೆಂದರೆ ಸ್ತ್ರೀಯ ಮಾಸಿಕ ಚಕ್ರಗತಿಯನ್ನು ನಿರ್ಧರಿಸುವದು. ಈ ಅವಧಿಯನ್ನು ಮೂರು ಭಾಗಗಳನ್ನಾಗಿ ಕಲ್ಪಿಸಿ ಮೊದಲ ಹತ್ತು ದಿನ ಕೊನೆಯ ಹತ್ತು ದಿನಗಳು ದಂಪತಿಗಳ ಸಮಾಗಮಕ್ಕೆ ಸುರಕ್ಷಿತ ಕಾಲವೆಂದು, ಮಧ್ಯದ ಹತ್ತು ದಿನಗಳು ಗರ್ಭಸಂಭವಕಾಲ Baby days ಅಥವಾ 'ಮಗುದಿನ'ಗಳೆಂದು ಪರಿಗಣಿಸಲಾಯಿತು. ಗರ್ಭಧಾರಣ ಸಂಭವದಿಂದ ಸುರಕ್ಷತತೆಯಲ್ಲಿರಬೇಕಾದರೆ ದಂಪತಿಗಳು ಹಿಂದೆ ಮುಂದೆ ಪುನ ಒಂದೊಂದು ದಿನ ಸೇರಿಸಿ ಸಂಭೋಗ ತೃಪ್ತಿ ಪಡೆಯಲು ಯೋಗ್ಯ ದಿನವೆಂದು ತಿಳಿದುಕೊಳ್ಳಬೇಕು. ಉದಾಹರಣೆಗಾಗಿ ಸ್ತ್ರೀಯಳ ಮಾಸಿಕ ರಜೋದಿನ ತಿಂಗಳದ ಮೊದಲನೇ ದಿನಾಂಕಕ್ಕೆ ಆಗಿದೆ ಎಂದು ತಿಳಿದುಕೊಳ್ಳುವಾ— ಮೇಲೆ ತಿಳಿಸಿದಂತೆ ಅಂದರೆ ೯ ನೇ ದಿನಾಂಕದಿಂದ ೧೯ನೇ ದಿನಾಂಕಿನ ವರೆಗೆ ಒಂದು ದಿನ ಸೇರಿಸಿ (ಹತ್ತು ದಿನಗಳಲ್ಲಿ) ಸಮಾಗಮವನ್ನು ಬಿಟ್ಟಿದ್ದರೆ ಸಂಪೂರ್ಣ ಸುರಕ್ಷಿತ ಕಾಲವಾಗುವದು. ಈ ಅವಧಿಯಲ್ಲಿ ಸಂಭೋಗ ಮಾಡಬಾರದು. ಹೆಣ್ಣುಮಕ್ಕಳು ತಮ್ಮ ಮಾಸಿಕ ರಜೋದಿನದ ದಿನಾಂಕ ನೆನಪಿನಲ್ಲಿಟ್ಟುಕೊಂಡು— ತಿಂಗಳ ತಾರೀಖಿಗೆ ಹೊಂದಿಸಿಕೊಳ್ಳಬೇಕು. ಹೀಗೆ ತಾನು

ಮುಟ್ಟಾಗಿ ೯ನೇ ದಿನದ ವರೆಗಿನ ಮೊದಲ ಸುರಕ್ಷಿತ ಕಾಲದಲ್ಲೂ ೧೯ನೇ ತಾರೀಖಿನಿಂದ ೨೮ನೇ ತಾರೀಖಿನವರೆಗೆ ಎರಡನೇ ಸುರಕ್ಷಿತ ಕಾಲದಲ್ಲೂ ದಂಪತಿಗಳು ಸಂಭೋಗ ತೃಪ್ತಿ ಮಾಡಿಕೊಂಡಾಗ ಗರ್ಭಧಾರಣವಾಗುವದಿಲ್ಲ. ಏಕೇಂದರೆ ಆಗ ಸ್ತ್ರೀಯಳ ಗರ್ಭಾಶಯದಲ್ಲಿ ಡಿಂಬಾಣುಗಳು (ಸ್ತ್ರೀ ಬೀಜಾಣುಗಳ ಉತ್ಪತ್ತಿ ಮತ್ತು ಬೆಳವಣಿಗೆಯ ಹಂತವಾಗಿರುವ) ಸಚೇತವಾಗಿರುವದಿಲ್ಲ. ಆದ್ದರಿಂದ ಸ್ತ್ರೀ ಸೌಖ್ಯ ಬೇಕು- ಮಕ್ಕಳು ಬೇಡ– ಎಂದಿದ್ದರೆ ದಂಪತಿಗಳು ಸ್ತ್ರೀಯಳ ಮಾಸಿಕ ರಜೋದಿನದ ೧೦ನೇ ದಿವಸಗಳಿಂದ ೧೮ನೇ ದಿವಸಗಳ ವರೆಗೆ ಸಮಾಗಮಕ್ಕೆ ಅವಕಾಶ ಕೊಡಬಾರದು. ಇದೇ ಸುಗಕ್ಷಿತ ಕಾಲ ಪದ್ಧತಿಯ ಮೂಲತತ್ವವಾಗಿದೆ.

ಒಂದು ಪಕ್ಷದಲ್ಲಿ ಸ್ತ್ರೀಯಳ ಮಾಸಿಕ ಚಕ್ರದ ಅವಧಿಯು ೩೦ ದಿನಗಳದ್ದಾಗಿದ್ದರೆ ಮೊದಲಿನ ೧೧ ದಿನಗಳು ಮತ್ತು ೨೦ನೇ ದಿನದಿಂದ ೩೦ನೇ ದಿನದ ವರೆಗೆ ಸಂಭೋಗಕ್ಕೆ ಸ್ವಾಗತ ಮತ್ತು ಸುರಕ್ಷಿತಕಾಲವೆಂದು ತಿಳಿದುಕೊಳ್ಳಬೇಕು. ಪ್ರತಿಯಾಗಿ ಹೇಳಿದ ಅಂತಿಮ ದಿನದ ಎರಡನೇ ದಿನವು ಮಾಸಿಕ ಧರ್ಮವು ಆರಂಭವಾಗುವದು. ಇದೇ ಪ್ರಕಾರ ಸ್ತ್ರೀಯಳ ೨೫ ದಿನಗಳ ಮಾಸಿಕ ಚಕ್ರವಾಗಿದ್ದರೆ ಮೊದಲಿನ ಆರು ದಿನಗಳು ಮತ್ತು ೧೫ನೇ ದಿನದಿಂದ ೨೫ನೇ ದಿನದವರೆಗೆ ಸಂಭೋಗಕ್ಕೆ ಸುರಕ್ಷಿತಕಾಲವೆಂದೂ ಮಧ್ಯದ ೭ನೇ ದಿನದಿಂದ ೧೪ನೇ ದಿನದವರೆಗೆ ಗರ್ಭಧಾರಣ ಸಂಭವ ಕಾಲವೆಂದೂ ತಿಳಿದುಕೊಳ್ಳಬೇಕು.

ಈ ವಿಧಾನದಿಂದಾಗಿ ಬಹಳಷ್ಟು ಜನರು ಸ್ವಯಂಪ್ರೇರಣೆಯಿಂದ ದಾಂಪತ್ಯ ಸುಖವನ್ನು ಪಡೆಯುತ್ತಿದ್ದಾರೆ. ಆದಾಗ್ಯೂ

ಹಲವಾರು ನ್ಯೂನತೆಗಳನ್ನು ಹಿಂದೆ ವಿವರಿಸಲಾಗಿದೆ. ವಿಶೇಷ ವಾಗಿ ಹೇಳುವದಾದರೆ ನೈಸರ್ಗಿಕವಾಗಿ ಕೆಲ ಸ್ತ್ರೀಯರ ಗರ್ಭ ಸಂಭವ ಅವಧಿಯು ಎರಡು ಅಥವಾ ಮೂರು ವರ್ಷಗಳ ಅಂತರದ್ದಾಗಿದ್ದರೆ ಮಾಸಿಕ ಧರ್ಮದ ನಿರ್ಧಾರ ಮಾಡುವದು ಬಹು ಕಷ್ಟ ಅಂಥವರಿಗೆ ಈ ಸುರಕ್ಷಿತಕಾಲದ ವಿಧಾನವನ್ನು ಅನುಸರಿಸಲು ಅಸಾಧ್ಯವಾಗುವದು. ಇದು ಸ್ತ್ರೀಯರ ದೈಹಿಕ ಸ್ವಭಾವವಾಗಿರುವದರಿಂದ ಗಂಡು ಮಗುವಿನ ಜನನದ ನಂತರ ಹೆಣ್ಣು ಮಗುವನ್ನು ಹಡೆಯುವ ಹಂಬಲವುಳ್ಳವರಾಗಿ ಮೂರು, ನಾಲ್ಕು ಗಂಡುಮಕ್ಕಳನ್ನು ಹಡೆದವರಿದ್ದಾರೆ. ಮತ್ತು ಮೂರು ನಾಲ್ಕು ಹೆಣ್ಣು ಮಕ್ಕಳನ್ನು ಹಡೆದು ಗಂಡು ಮಗು ವನ್ನು ಪಡೆಯಲು ಹಂಬಲಿಸುವವರೂ ಇದ್ದಾರೆ. ಹೀಗಿರುವ ಸ್ಥಿತಿಯಲ್ಲಿ ಸುರಕ್ಷಿತಕಾಲ ವಿಧಾನವನ್ನು ಇಂಥ ದಂಪತಿಗಳು ನಂಬುವಂತಿಲ್ಲ, ಅಲ್ಲದೆ ಸತಿಪತಿಗಳು ಸಹಕಾರ ಸಂಯಮ ಮನೋಬಲವನ್ನು ಪಡೆದಲ್ಲಿ ಮಾತ್ರ ಸಂಪೂರ್ಣ ಯಶಸ್ಸನ್ನು ಸುರಕ್ಷಿತ ಪದ್ಧತಿಯಿಂದ ಪಡೆಯಬಹುದು. ಆದರೆ ಸಾಮಾನ್ಯ ಮಾನವರಲ್ಲಿ ಲೈಂಗಿಕ ಪ್ರವೃತ್ತಿಯು ಹತೋಟಿಯಲ್ಲಿಲ್ಲ. ಪಶು ಪಕ್ಷಿಗಳು ಋತುಮಾನಕ್ಕನುಗುಣವಾಗಿ (**Sex-instinct**) ಲೈಂಗಿಕ ತೃಪ್ತಿಯನ್ನು **Instincts** ಮೂಲ ಪ್ರವೃತ್ತಿಯಂತೆ ನಡೆಸುತ್ತವೆ.

ಒಂದಾನೊಂದು ಕಾಲದಲ್ಲಿ ನಮ್ಮ ದೇಶದ ಜನಸಂಖ್ಯೆಯು ತೀರಾ ಕಡಿಮೆ ಇತ್ತು. ಯುದ್ಧಕ್ಕಾಗಿ ಪಶುಸಂಗೋಪನೆಗಾಗಿ ಕೃಷಿ ಮುಂತಾದ ಉದ್ಯೋಗಗಳಿಗಾಗಿ ಮಕ್ಕಳು ಅವಶ್ಯ ಬೇಕಾ

ಗಿದ್ದ ಆ ಕಾಲಕ್ಕೆ ಹೆಚ್ಚು ಮಕ್ಕಳೆಂದರೆ ಅಷ್ಟೈಶ್ವರ್ಯಗಳಲ್ಲಿ ಒಂದು ಸಂಪತ್ತು ಎಂದು ಹೇಳಬಹುದಾಗಿತ್ತು. ಆದರೆ ಇಂದಿಗೆ ಅದು ಕಾಲೋಚಿತವಾಗಿಲ್ಲ. ಅದಲ್ಲದೆ ಪ್ರಾಚೀನ ಕಾಲದಲ್ಲಿ ಶಾಸ್ತ್ರಾನುಸಾರವಾಗಿ ದೀರ್ಘ ಬ್ರಹ್ಮಚರ್ಯಪಾಲನೆ, ವಿವಾಹಿತರಲ್ಲೂ ಪರ್ವಕಾಲಗಳಲ್ಲಿ ಅನುಸರಿಸಬೇಕಾಗಿದ್ದ ವಿರತಿ ಇತ್ಯಾದಿಗಳೆಲ್ಲ ಅಪ್ರತ್ಯಕ್ಷವಾಗಿ ಸಂತಾನ ಸಂಯಮ ಸಾಧಕಗಳಾಗಿದ್ದವು. ಮೇಲಾಗಿ ಸ್ತ್ರೀಯರಿಗೆ ಆಶೀರ್ವದಿಸುವಾಗ ಋಗ್ವೇದದ ಮಂತ್ರ ಒಂದರಲ್ಲಿ 'ಬಹು ಪ್ರಜಾನಿ ಋತಿ ಮಾವಿವೇಶ' ಎಂದರೆ ಮಿತಿಮೀರಿದ ಮಕ್ಕಳನ್ನು ಪಡೆಯುವ ದುಃಖಕ್ಕೆ ಪಾತ್ರಳಾಗಬೇಡ ಎಂದು ಹರಸುತ್ತಿದ್ದರು. ಇಂಥ ಆದರ್ಶಗಳನ್ನೆಲ್ಲಾ ಯೋಚಿಸಿ ನೋಡಿದರೆ ಕುಟುಂಬ ಯೋಜನೆ ಸರ್ವಥಾ ಪಾಪಕರವಲ್ಲ ಎಂದು ಸ್ಪಷ್ಟವಾಗದಿರದು.

ಇಂದು ಅವಿಭಕ್ತ ಕುಟುಂಬವು ಛಿನ್ನ ವಿಛಿನ್ನವಾಗಿ ಸರ್ವಸ್ವತಂತ್ರ ವಿಭಕ್ತ ಕುಟುಂಬ ಪದ್ಧತಿಯು ಬೆಳೆಯುತ್ತಿದೆ. ಅನ್ಯಸಂಸ್ಕೃತಿಯ ಪ್ರಭಾವದಿಂದಾಗಿ ವಿವಾಹಿತರಲ್ಲಿ ಪರ್ವಕಾಲಗಳಲ್ಲಿ ಅನುಸರಿಸಬೇಕಾದ ವಿರತಿಯು ಮಾಯವಾಗುತ್ತಿದೆ. ಧರ್ಮಶಾಸ್ತ್ರಗಳ ಮೌಲ್ಯಗಳಿಗೆ ವೈಜ್ಞಾನಿಕ ತರ್ಕವಿತರ್ಕದ ಒರೆಗಲ್ಲು ಹಚ್ಚಿ ಪರೀಕ್ಷಿಸಲಾಗುತ್ತಿದೆ. ಇನ್ನು ನಮ್ಮ ದೇಶದಲ್ಲಿಯ ಹಳೆ ಸಂಪ್ರದಾಯ, ಕಟ್ಟಳೆಗಳು ಇಂದಿಗೂ ಕುಟುಂಬ ಯೋಜನೆಗೆ ಅಪ್ರತ್ಯಕ್ಷವಾಗಿ ಹೇಗೆ ಪುಷ್ಟಿಯಾಗಿವೆ ಎಂಬುದನ್ನು ಪರಾಮರ್ಶಿಸೋಣ.

ನವದಂಪತಿಗಳು ಪರ್ವಕಾಲದ ವಿರತಿಯನ್ನು ಪಾಲಿಸಲು ಹಲವು ಸಂಪ್ರದಾಯಗಳು ಇನ್ನೂ ಉಳಿದುಕೊಂಡಿವೆ ಎನ್ನುವ ಪಕ್ಷ ಇಂದಿಗೂ 'ಆಷಾಡ ಮಾಸದಲ್ಲಿ ಅತ್ತೆ ಸೊಸೆ ಅಗಲಿರ ಬೇಕು' ಅಂದರೆ ಈ ತಿಂಗಳಲ್ಲಿ ದಂಪತಿಗಳ ಸಮಾಗಮಕ್ಕೆ ಎಗೆ ಯಿಲ್ಲವೆಂದಂತೆ. ಇದು ಅಪ್ರತ್ಯಕ್ಷವಾಗಿ ಸಂತಾನ ಸಂಯಮ ಸಾಧಿಸಿದಂತೆ. ಭಾದ್ರಪದ ಮಾಸವು 'ಪಿತ್ರಮಾಸ'. ಈ ಮಾಸ ದಿಂದ ಚಾತುರ್ಮಾಸದ ಹಬ್ಬ ಹಂದಿನಗಳಾದ ಆಶ್ವೀನ,ಕಾರ್ತಿಕ ತಿಂಗಳಲ್ಲಿ ಸ್ತ್ರೀಯರಿಗೆ ತವರು ಮನೆ ವಾಸ. ಮುಂದಿನ ಪೌಷ್ಯವು ಶೂನ್ಯಮಾಸವೆಂತಲೂ, ಆಗ ಅತ್ತಿಗೆ ಮೈದುನರು ಕೂಡಿರ ಬಾರದೆಂದೂ ನಂಬಿಕೆ. ಮತ್ತು ಫಾಲ್ಗುಣ ಮಾಸವು ನವ ವಧು ವರರಿಗೆ ಪ್ರಸಕ್ತ ಮಾಸವಲ್ಲವಾದ್ದರಿಂದ ಸಂತಾನ ಸಂಯಮ ಕಾಲವಾಗಿ ಪಾಲಿಸುತ್ತಿದ್ದರು.

ವಿವಾಹಿತ ಗಂಡಸರು ಅತ್ಯಂತ ಸರಳವಾದ ಉಪಾಯಗಳ ಬಗ್ಗೆ ತಿಳಿದುಕೊಳ್ಳುವಾಗ ಧಾರ್ಮಿಕ ಹಾಗೂ ಮಾನಸಿಕ ಒಲವು ನಿಲುವುಗಳ ಬಗ್ಗೆ ಮನದಟ್ಟು ಮಾಡಿಕೊಂಡಿರಬೇಕು. ವಿವಾಹವಾದ ಮೇಲೂ ಬ್ರಹ್ಮಚರ್ಯ ವ್ರತಪಾಲನೆಗಳ ಅಪಾರ್ಥ ಮಾಡಿಕೊಳ್ಳದೇ ನಿಯಮಿತವಾದ ಸಮಾಗಮ, ಹಿತ ಮಿತಸಂತಾನ ಪಡೆದು ಸುಖಸಂಸಾರ ಸಾಗಿಸಬೇಕು. ಅಂದರೆ ಪರ್ವಕಾಲದಲ್ಲಿ ಅನುಸರಿಸಬೇಕಾದ ವಿರತಿ, ಸ್ವಯಂ ಸಂತಾನ ಇಂದ್ರಿಯ ನಿಗ್ರಹ ಪಾಲನೆ ಮಾಡಬೇಕು. ಕೊನೆಯದಾಗಿ ಮುಂದೆ ತಿಳಿಸಿದ ಕುಟುಂಬ ಯೋಜನೆಯ ಸಾಧನಗಳನ್ನು

ದೈಹಿಕ ಮತ್ತು ಮಾನಸಿಕ ಸ್ಥಿತಿಯನ್ನು ಲಕ್ಷ್ಯದಲ್ಲಿರಿಸಿಕೊಂಡು ಅನುಸರಿಸಬೇಕು.

ಪ್ರಾಚೀನ ಕಾಲದಿಂದಲೂ ಭಾರತದಲ್ಲಿ ದೇವದಾಸಿಯರು 'ಜಬಾ ಕುಸುಮ' ಪುಷ್ಪದ ಉಪಯೋಗವು ಗರ್ಭಿಣಿಯರಾಗದಿರಲು ಅತ್ಯುತ್ತಮ ಫಲಕಾರಿಯೆಂದು ಬಗೆದಿದ್ದರು. ಜಬಾ ಕುಸುಮ ಪುಷ್ಪದಲ್ಲಿರುವ ಗರ್ಭನಿರೋಧಕ ಗುಣಧರ್ಮವನ್ನು ಇಂದು ವೈಜ್ಞಾನಿಕರು ಕಂಡುಹಿಡಿಯತೊಡಗಿದ್ದಾರೆ. ಸ್ತ್ರೀಯರು ಆಯಾ ಪ್ರದೇಶಗಳಲ್ಲಿ ತಮಗೆ ಸುಲಭವಾಗಿ ಲಭ್ಯವಾಗುವ ನಿಂಬೆಹಣ್ಣಿನ ರಸ, ಪಟಕದ ರಸ, ಔಡಲ ಎಣ್ಣೆ, ಬೆಣ್ಣೆ, ಜೇನುತುಪ್ಪ ಮತ್ತು ಸಾಬೂನಿನ ನೊರೆಯಲ್ಲಿ ಹತ್ತಿಯನ್ನೋ ಅಥವಾ ಸ್ಪಂಜನ್ನೋ ಅದ್ದಿ ಉಪಯೋಗಿಸುವರು. ಈ ಎಲ್ಲಾ ವಿಧಾನಗಳು ಅನುಸರಿಸುವಾಗ, ಡ್ಯುಸಿಂಗ ರೀತಿಯನ್ನು ಅನುಸರಿಸಾಗ ಪ್ರತ್ಯೇಕವಾದ ಶೌಚ್ಯಾಗಾರ ಹಾಗು ಶುದ್ಧ ನೀರಿನ ವ್ಯವಸ್ಥೆ ಇರಬೇಕಾಗುತ್ತದೆ. ಬಹುಕಾಲದಿಂದಲೂ ಚೀನಿ ಮಹಿಳೆಯರು ಗೊದಮೊಟ್ಟೆಯು ಗರ್ಭನಿರೋಧಕ ಸಾಧನವೆಂದು ನುಂಗುತ್ತಿದ್ದರು. ಇಂದಿಗೂ ಗ್ರಾಮಾಂತರಗಳಲ್ಲಿ ಹಳ್ಳಿ ವೈದ್ಯರು ಗಿಡಮೂಲಿಕೆಗಳ ಉಪಯೋಗ ಮಾಡುತ್ತಿದ್ದಾರೆ. ಅಶಿಕ್ಷಿತ ಮಹಿಳೆಯರು ಹಳ್ಳಿ ವೈದ್ಯರ ಸಲಹೆಗಳಿಗೆ ಮಾರುಹೋಗಿ ತಪ್ಪು ಗ್ರಹಿಕೆಯಿಂದ ವನಸ್ಪತಿಯ ಉಪಯೋಗ ಮಾಡಿಕೊಂಡು ಮರಣವನ್ನು ಅಪ್ಪಿರುವದುಂಟು. ಆದ್ದರಿಂದ ಹಳ್ಳಿ ಜನರು ಅಜ್ಞಾನವನ್ನು ಹೋಗಲಾಡಿಸಿಕೊಂಡು ಆಧುನಿಕ ಪದ್ಧತಿಯ

ಕುಟುಂಬ ಯೋಜನೆಯ ಸಾಧನಗಳ ಉಪಯೋಗವನ್ನು ಅರಿತು ಕೊಳ್ಳಬೇಕೆಂದು ನಮ್ಮ ಸಲಹೆ.

ನಾವು ಇದುವರೆಗೆ ಅತಿಕಡಿಮೆ ವೆಚ್ಚದಲ್ಲಿ, ಸುಲಭ ಲಭ್ಯವಾದ ಸಾಧನಗಳ ಬಗ್ಗೆ ತಿಳಿದುಕೊಂಡಂತಾಯಿತು. ಈ ಸಾಧನಗಳೆಲ್ಲವುಗಳು ತಾತ್ಕಾಲಿಕವಾದವುಗಳಾಗಿವೆ. ಕಡು ಬಡವರು, ಅಜ್ಞಾನಿಗಳು ಈ ಸಾಧನಗಳ ಉಪಯೋಗವನ್ನು ಬಹು ಕಡಿಮೆ ಪ್ರಮಾಣದಲ್ಲಿ ಅದೂ ಅಲಕ್ಷತನದಿಂದ ಬಳಸು ವರು. ಇನ್ನು ನಾವು ಶಾಶ್ವತ ವಿಧಾನಗಳ ಬಗ್ಗೆ ತಿಳಿದು ಕೊಳ್ಳೋಣ ಏಕೆಂದರೆ ಎರಡು, ಮೂರು, ಅಥವಾ ಇನ್ನೂ ಹೆಚ್ಚಿನ ಮಕ್ಕಳನ್ನು ಪಡೆದ ದಂಪತಿಗಳು ಶಾಶ್ವತ ಸಂತತಿ ನಿಯಂತ್ರಣವನ್ನು ಪ್ರತ್ಯಕ್ಷವಾಗಿಲ್ಲದಿದ್ದರೂ ಅಪ್ರತ್ಯಕ್ಷವಾಗಿ ಯಾವರೂ ಬಯಸುತ್ತಾರೆ. ಮಕ್ಕಳೇ ಸಾಕು ಇನ್ನು, ಮತ್ತೊಂದು ಮಗು ಬೇಡ ಎನ್ನುವ ದಂಪತಿಗಳಿಗೆ ಮುಂದೆ ತಿಳಿಸುವ ಶಾಶ್ವತ ವಿಧಾನಗಳನ್ನು ಅಳವಡಿಸಿಕೊಳ್ಳಲು ಸದಾ ಸ್ವಾಗತವಿದೆ. ಇದಕ್ಕಾಗಿ ನಮ್ಮ ಸರಕಾರ ಹೆಚ್ಚಿನ ಸಂಖ್ಯೆ ಯಲ್ಲಿ ಪ್ರೋತ್ಸಾಹವನ್ನು, ಹಣ ಹಾಗು ಇನ್ನಿತರ ಸೌಲಭ್ಯ ಗಳನ್ನು ಕಲ್ಪಿಸಿಕೊಡುತ್ತಿದೆ. ಅವುಗಳಿಗೆ ನಮ್ಮೆಲ್ಲರ ಸಹ ಕಾರ ಬೇಕೇ ಬೇಕು.

ನಿರೋಧ(ಗಂಡಸರಿಗಾಗಿ) : ಈ ಸಾಧನವು ತೆಳುವಾದ ರಬ್ಬರಿನ ಚೀಲವಾಗಿದ್ದು ವೈಜ್ಞಾನಿಕವಾಗಿ ಪರಿಶೋಧಿಸಲ್ಪಟ್ಟ ದ್ದಾಗಿದೆ. ಇದಕ್ಕೆ F.L, ಕಂಡಮ್ ಎಂತಲೂ ಕರೆಯುತ್ತಾರೆ.

ಪ್ರತಿಯೊಂದು ಚೀಲವು ಪ್ರತ್ಯೇಕವಾಗಿ ಪ್ಯಾಕು ಮಾಡಲ್ಪಟ್ಟಿರುತ್ತದೆ. ಪ್ರತಿ ಸಂಭೋಗಕ್ಕೆ ಹೊಸ ಹೊಸದಾದ ನಿರೋಧ ಉಪಯೋಗಿಸಬೇಕು. ಒಮ್ಮೆ ಉಪಯೋಗಿಸಲ್ಪಟ್ಟ ನಿರೋಧ ಪುನ ಉಪಯೋಗಿಸಕೂಡದು. ಇವುಗಳನ್ನು ಎಲ್ಲಾ ಕುಟುಂಬ ಯೋಜನೆಯ ಕೇಂದ್ರಗಳಲ್ಲಿ, ಹಾಗೆ ಮತ್ತು ಶಿಶುಕಲ್ಯಾಣ ಕೇಂದ್ರಗಳಲ್ಲಿ ಪುರುಷರು ಉಚಿತವಾಗಿ ಪಡೆಯಬಹುದು. ಗ್ರಾಮೀಣ ಪ್ರದೇಶಗಳಲ್ಲಿಯ ಅಂಚೆ ಕಚೇರಿಯಲ್ಲಿ, ಸಣ್ಣ ಪುಟ್ಟ ಅಂಗಡಿಗಳಲ್ಲಿ, ನಗರ ಕೇಂದ್ರಗಳಲ್ಲಿ ಪಾನ ಬೀಡಾ ಅಂಗಡಿ ಮತ್ತು ಔಷಧಿ ಅಂಗಡಿಗಳಲ್ಲಿ ಹೇರಳವಾಗಿ ಕೇವಲ ೨೫ ಪೈಸೆಗೆ ಮೂರು ನಿರೋಧಗಳುಳ್ಳ ಒಂದು ಪ್ಯಾಕು ಮಾರಾಟಕ್ಕೆ ದೊರೆಯುವದು. ಈ ಸಾಧನವು ಪ್ರಪಂಚದಾದ್ಯಂತ ಜನಪ್ರಿಯವಾಗತೊಡಗಿದೆ. ೧೯೭೨–೭೩ ಸಾಲಿನಲ್ಲಿ ೭೮.೬೮ ದಶಲಕ್ಷ ನಿರೋಧಗಳು ಮಾರಾಟವಾಗಿ ೧೫% ಜನರು ಉಪಯೋಗಿಸಿದ್ದಾರೆಂದು ತಿಳಿದುಬಂದಿದೆ. ನಿರೋಧ ಉಪಯೋಗಿಸುವಾಗ ಅದರ ಒಳಗೆ ಗಾಳಿ ಸೇರದಂತೆ ಸಂಭೋಗದ ಮುನ್ನ ಉದ್ರಿಕ್ತವಾದ ಶಿಶ್ನಕ್ಕೆ ತೊಟ್ಟುಕೊಳ್ಳಬೇಕು. ಇದು ಸಂಭೋಗದಲ್ಲಿ ಅಡೆತಡೆಯುಂಟಾಗದೇ ಸ್ವಾಭಾವಿಕವಾಗಿ ತೃಪ್ತಿ ಕೊಡಬಲ್ಲ ಸಾಧನವಾಗಿದೆ. ಹೀಗೆ ಮಾಡುವದರಿಂದ ಸತಿಯ ಯೋನಿಯೊಳಗೆ ಪುರುಷನ ವೀರ್ಯಾಣುಗಳು ಸೇರುವದಿಲ್ಲ. ತತ್ಫಲವಾಗಿ ಅವಳು ಗರ್ಭಧರಿಸುವದಿಲ್ಲ. ಪದೇ ಪದೇ ನಿರೋಧ ಬಳಕೆಯಿಂದ ಪತಿಯು ಬೇಜಾರು ಪಟ್ಟುಕೊಳ್ಳಬಹುದು. ಇಂಥ ಸಂದರ್ಭದಲ್ಲಿ ಸತಿಯು ಪ್ರೀತಿಯಿಂದ ನಿರೋಧವನ್ನು ಪತಿಗೆ

ಧರಿಸಬೇಕಾಗುವದು. ಇದರಿಂದ ಪತಿಯ ಮನಸ್ಸಿನ ಚಪಲತೆಗೆ ಇನ್ನಷ್ಟು ನೆರಗುಕೊಟ್ಟಂತಾಗುವದರಲ್ಲಿ ಸಂದೇಹವಿಲ್ಲ.

ಒಂದು ವೇಳೆ ಸತಿಗೆ ಮಾನಸಿಕ ತೃಪ್ತಿಯಾಗದಿದ್ದಲ್ಲಿ ಪತಿಯು ನಿರೋಧ ಬಳಕೆಯ ಬದಲಾಗಿ ಮುಂದೆ ಹೇಳಿದ ಸಾಧನಗಳನ್ನು ಜನನ ನಿಯಂತ್ರಣಕ್ಕಾಗಿ ಉಪಯೋಗಿಸಲು ಮರೆಯಬಾರದು.

ನೊರೆ ಮಾತ್ರೆಗಳು (Foam Tablets) : ಈ ನೊರೆ ಗುಳಿಗೆಗಳು ಪೇಟೆಯಲ್ಲಿ Cantab ಎಂಬ ಹೆಸರಿನಿಂದ ಮಾರಾಟವಾಗುವವು. ಈ ಗುಳಿಗೆಯನ್ನು ಉಪಯೋಗಮಾಡುವಾಗ ಸತಿಯೇ ಆಗಲಿ ಅಥವಾ ಪತಿಯೇ ಆಗಲಿ ಸಂಭೋಗಕ್ಕೆ ಐದು ಹತ್ತು ನಿಮಿಷಗಳ ಮೊದಲು ನೀರಿನಲ್ಲಿ ತೋಯಿಸಿ ಯೋನಿಯೊಳಗಡೆ ಅಳವಡಿಸಿಕೊಳ್ಳಬೇಕು. ಈ ರಾಸಾಯನಿಕ ಗುಳಿಗೆಯು ತೆಳುವಾದ ಫಿಲ್ಮಿನಂತಹ ರಕ್ಷಣಾ ಪೊರೆಗಳನ್ನು ನಿರ್ಮಾಣಮಾಡಿ ಪುರುಷನ ವಿರ್ಯಾಣುಗಳನ್ನು ನಾಶಮಾಡುವದು ಈ ಗುಳಿಗೆಗಳು ಗರ್ಭಧಾರಣೆಯ ವಿರುದ್ಧ ಸ್ವಲ್ಪ ನೆರವು ನೀಡುವದು ನಿಜ. ಆದರೆ ಅಷ್ಟು ಪರಿಣಾಮಕಾರಿಯಾದುದಲ್ಲ. ಏಕೆಂದರೆ ಪ್ರತಿ ಸಂಭೋಗ ವೇಳೆಯಲ್ಲಿ ಉಪಯೋಗಿಸುವ ಸತಿಪತಿಗಳಿಗೆ ಅಲಕ್ಷ್ಯತನವನ್ನುಂಟು ಮಾಡುವದು. ಇದರ ಯಶಸ್ಸು ಜನರು ಉಪಯೋಗಿಸುವ ವಿಧಾನವನ್ನವಲಂಬಿಸುತ್ತದೆ. ಗ್ರಾಮಾಂತರಗಳಲ್ಲಿ ಸ್ತ್ರೀಯರು ಈ ಗುಳಿಗೆಗಳನ್ನು ನುಂಗಿದ ಬಗ್ಗೆಯೂ ನಿದರ್ಶನಗಳುಂಟು.

ನುಂಗುವ ಗುಳಿಗೆಗಳು (ಸ್ತ್ರೀಯರಿಗಾಗಿ) : ಜನನ ನಿಯಂತ್ರಣ ಶಕ್ತಿಯು ನಮ್ಮ ಕೈಯಲ್ಲಿದೆ. ಎಷ್ಟು ಕಾಲ ಬೇಕಾದರೂ ಗರ್ಭಧಾರಣೆಯನ್ನು ತಡೆಯಲು ಪೇಟೆಯಲ್ಲಿ ಮಾರಾಟವಾಗುವ ಈ ಗುಳಿಗೆಗಳು ಜನಪ್ರಿಯವಾಗಿವೆ. ನುಂಗುವ ಗುಳಿಗೆಗಳು ರಾಸಾಯನಿಕ ಪದ್ಧತಿಯಿಂದ ಸ್ತ್ರೀಯರಲ್ಲಿ ಹಾರ್ಮೋನುಗಳ ಬೆಳವಣಿಗೆಯ ನಿಯಂತ್ರಣ ಮಾಡುವವು. ಪ್ರತಿ ತಿಂಗಳು ೨೦-೨೨ ದಿನಗಳ ಕಾಲ ಸ್ತ್ರೀಯಳು ಈ ಗುಳಿಗೆಗಳ ಸೇವನೆ ಮಾಡಬೇಕಾಗುತ್ತದೆ. ಮಧ್ಯದಲ್ಲಿ ಮರೆವಿನಿಂದ ಸೇವಿಸದೆ ಸ್ತ್ರೀಯರು ಗರ್ಭಧಾರಣರಾದವರಿದ್ದಾರೆ. ಪ್ರತಿ ಮಾಸಿಕ ಧರ್ಮದ ಮೊದಲ ದಿನದಿಂದ ಆರು ದಿನ ಬಿಟ್ಟು ನಂತರ ತಪ್ಪದೇ ಈ ಗುಳಿಗೆಗಳನ್ನು ನುಂಗಬೇಕು. ಈ ಗುಳಿಗೆಗಳ ಸೇವನೆಯಿಂದ ಸ್ತ್ರೀಯಳ ಆರೋಗ್ಯಕ್ಕೆ ಧಕ್ಕೆಯಿಲ್ಲ. ಮಹಿಳಾ ವೈದ್ಯರು ಎಲ್ಲ ಸ್ತ್ರೀಯರಿಗೆ ಈ ಸಲಹೆ ಕೊಡುವದಿಲ್ಲ. ಏಕೆಂದರೆ ಹಲವು ಸ್ತ್ರೀಯರಿಗೆ ಈ ಗುಳಿಗೆಯ ಸೇವನೆಯಿಂದ ತಲೆ ಸುತ್ತುವಿಕೆ, ಓಕರಿಕೆ (ವಾಂತಿ), ಮೈಭಾರವಾಗುವಿಕೆ, ಮಾಸಿಕ ಧರ್ಮ ನಿಂತಂತೆ ಲಕ್ಷಣ ಕಂಡುಬಂದಿವೆ. ಆದರೆ ನಿರಂತರವಾಗಿ ಈ ಗುಳಿಗೆಗಳನ್ನು ಉಪಯೋಗಿಸಿದ ಸ್ತ್ರೀಯರಲ್ಲಿ ಮೇಲೆ ಹೇಳಿದ ಲಕ್ಷಣಗಳು ಕ್ರಮೇಣವಾಗಿ ಮಾಯವಾದದ್ದು ತಿಳಿದು ಬಂದಿದೆ. ಹಲವು ಸಾರೆ ಸ್ತ್ರೀಯರು ತಮ್ಮ ಮನಸ್ಸಿಗೆ ಬಂದಂತೆ ಅನಿವಾರ್ಯವಾಗಿ ಸಿಕ್ಕ ಮಾದರಿಯ ನುಂಗುವ ಗುಳಿಗೆ ತಿಂದು ಆರೋಗ್ಯ ಕೆಡಿಸಿಕೊಂಡುದುಂಟು.

ಡಯಾಫ್ರಂ (ಸ್ತ್ರೀಯರಿಗಾಗಿ) :

ಈ ಸಾಧನವು ರಬ್ಬರದಿಂದ ತಯಾರಿಸಲ್ಪಟ್ಟಿದ್ದು ವಿವಿಧ ಅಳತೆ

ಯೊಂದಿಗೆ ದೊರೆಯುತ್ತದೆ. ಮಹಿಳಾ ವೈದ್ಯರು ಡಯಾಫ್ರಂನ್ನು ಸ್ತ್ರೀಯರಿಗೆ ಅಳವಡಿಸಿಕೊಳ್ಳುವ ವಿಧಾನವನ್ನು ತೋರಿಸಿಕೊಡುತ್ತಾರೆ. ಸ್ತ್ರೀಯರು ಸಂಭೋಗದ ಮುಂಚೆ ಯೋನಿದ್ವಾರದಲ್ಲಿ ಇದನ್ನು ಅಳವಡಿಸಿಕೊಳ್ಳಬೇಕಾಗುತ್ತದೆ. ಇದು ಸ್ತ್ರೀಯರ ಶುಕ್ರಾಣು ಮತ್ತು ಪುರುಷರ ವೀರ್ಯಾಣುಗಳ ಕೂಡುವಿಕೆಯನ್ನು ತಡೆಯುತ್ತದೆ. ಈ ಸಾಧನಕ್ಕೆ ಗರ್ಭನಿರೋಧಕ ಮುಲಾಮು ಸವರುವದು ಒಳ್ಳೆಯದು. ಸಂಭೋಗದ ಆರು ಗಂಟೆಗಳ ನಂತರ ಈ ಸಾಧನ ಹೊರಗೆ ತೆಗೆದು ಸೋಪಿನಿಂದ ಸ್ವಚ್ಛಮಾಡಿಡಬೇಕು. ಈ ಸಾಧನದಿಂದ ಸಂಭೋಗ ತೃಪ್ತಿಗೆ ಏನೊಂದು ತೊಂದರೆಯಾಗದೆ ಪತಿಪತಿಗಳಿಗೆ ಆನಂದ ದೊರೆಯುವದು.

ಕ್ರೀಂ ಮತ್ತು ಜೆಲ್ಲಿ (Cream & Jelly) (ಸ್ತ್ರೀಯರಿಗಾಗಿ): ಇದು ನಾನಾ ಹೆಸರುಗಳಿಂದ ಟ್ಯೂಬಿನಲ್ಲಿ ಮಾರಾಟವಾಗುವ ರಾಸಾಯನಿಕ ವಸ್ತುವಿನಿಂದ ತಯಾರಿಸಲ್ಪಟ್ಟ ಮುಲಾಮು ಆಗಿರುತ್ತದೆ. ಇದರ ಉಪಯೋಗವು ನೊರೆಗುಳಿಗೆಗಳಂತೆ ಹೆಣ್ಣುಮಕ್ಕಳಿಗೆ ಮೀಸಲಾಗಿದೆ. ಸಂಭೋಗದ ಮುನ್ನ ಸ್ತ್ರೀಯರು ಈ ಮುಲಾಮನ್ನು ಯೋನಿಯೊಳಗೆ ಲೇಪಿಸಿಕೊಳ್ಳಬೇಕು. ಈ ಮುಲಾಮು ಯೋನಿಯ ತೇವಿನೊಂದಿಗೆ ಕರಗಿ ನೊರೆಯಂತಹ ರಕ್ಷಣಾ ಪೊರೆ ನಿರ್ಮಿಸಿ ವೀರ್ಯಾಣುಗಳನ್ನು ನಾಶಮಾಡುತ್ತದೆ. ಪರದೇಶಗಳಲ್ಲಿ ಈ ಸಾಧನದ ಬಳಕೆ ಬಹಳ ಪ್ರಚಾರದಲ್ಲಿದೆ. ಮನಮೆಚ್ಚಿಗೆಯ ರೂಪದಲ್ಲಿ ದೊರೆಯುವ ಕ್ರೀಂ ಮತ್ತು ಜೆಲ್ಲಿಟ್ಯೂಬುಗಳು ಸ್ತ್ರೀಯರ ಕೈಚೀಲದಲ್ಲಿ ಸೇರಿ

ರುವವು. ಇತ್ತೀಚೆಗೆ ನಮ್ಮ ದೇಶದಲ್ಲಿ ಪತ್ರಿಕೆಗಳ ಜಾಹೀರಾತುಗಳಲ್ಲಿ ಡೆಲಫಿನ್ ಕ್ರೀಮಿನ (Delfin Cream) ಉಪಯೋಗದ ವಿಧಾನವು ಜನಪ್ರಿಯವಾಗತೊಡಗಿದೆ. ಸುಶಿಕ್ಷಿತ ಮಹಿಳೆಯರನ್ನು ಈ ಕ್ರೀಮಿನ ಉಪಯುಕ್ತತೆ, ನಿರ್ಮಲತೆಯು ಆದರ್ಶಗಳು ಮನ ಒಲಿಸುತ್ತಿವೆ. ಸ್ತ್ರೀಯರಿಗೆ ಈ ಕ್ರೀಮ್ ಉಪಯೋಗದಿಂದ ಯಾವ ರೀತಿಯ ಅಸಹ್ಯತನ, ಮಲೀನತೆ ಉಂಟಾಗುವದಿಲ್ಲ.

ಇತ್ತೀಚೆಗೆ ಭಾರತದಲ್ಲಿ ತಯಾರಾಗುತ್ತಿರುವ ಡಯೋಸ್ಕೊರಿಯಾ ಗುಳಿಗೆಗಳು ಭಾರತೀಯರಿಗೆ ಕೊಡುಗೆಯಾಗಿವೆ. ಈ ಡಯೋಸ್ಕೊರಿಯಾ ಗುಳಿಗೆಗಳು ಗರ್ಭನಿರೋಧಕ ಸಾಧನವೆಂದು ಅಂಗೀಕರಿಸಲ್ಪಟ್ಟಿವೆ. ಇನ್ನೊಂದು ಹೊಸ ಸಾಧನದ ಪ್ರಯೋಗವು ಪರದೇಶಗಳಲ್ಲಿ ನಡೆದಿದೆ. ಅಮೇರಿಕಾ ದೇಶದಲ್ಲಿ ಕ್ಯಾಲಿಫೋರ್ನಿಯಾ ಡ್ರಗ್ ಹೌಸದವರು (California Drug House) ಸಂಶೋಧಿಸಿದ ಉಪಾಯಕ್ಕೆ U. P. S. ಎಂದು ಕರೆದಿದ್ದಾರೆ. ಈ Uterine Progesterone System ವನ್ನು ಚೀನಿಯರು ಮೊಟ್ಟಮೊದಲಿಗೆ ಪರೀಕ್ಷಿಸಿಕೊಳ್ಳುತ್ತಿದ್ದಾರೆ. ಚೀನಾ ದೇಶದ ಪೇಕಿಂಗ, ಶಾಂಘಾಯಿ ಮತ್ತು ಕಾಂಟಾನ ಪಟ್ಟಣಕ್ಕೆ ಸೇರಿದ ೧೫೦ ಸ್ತ್ರೀಯರ ಮೇಲೆ ಈ U. P. S. ಉಪಾಯ ಪ್ರಯೋಗವನ್ನು ನಡೆಸಲಾಗಿದೆ.

ಗರ್ಭಧಾರಣೆ ಕಾಲ ಸೂಚಿಸುವ ಕುಂಕುಮ : ಇದು ಕುಟುಂಬ ಯೋಜನೆಯ ಕಾರ್ಯಕ್ರಮಗಳಲ್ಲಿ ಬಳಸುವ ಹೊಸ ಸಾಧನವು. ಇದನ್ನು ಭಾರತೀಯರಿಂದ ಅಭಿವೃದ್ಧಿಪಡಿಸಲಾಗಿದೆ.

ಈ ಸಾಧನವು ತೆಳುವಾದ ಫಿಲ್ಮ್ ರೂಪದಲ್ಲಿ ಸಾಧಾರಣ ಕೆಂಪು ಬಣ್ಣದ್ದಿದ್ದು ಮಹಿಳೆಯರು ಧರಿಸಲು ಯೋಗ್ಯ ಕುಂಕುಮ ತಿಲಕವಾಗಿದೆ. ಇದಕ್ಕೆ L. C. T. D. ಲಿಕ್ವಿಡ್ ಥರ್ಮಲ್ ಡಿವೈಸ್ ಎಂದು ಹೆಸರಿಡಲಾಗಿದೆ. ಇದನ್ನು ನವದೆಹಲಿಯ ಭೌತಶಾಸ್ತ್ರ ಪ್ರಯೋಗ ಶಾಲೆಯಲ್ಲಿ ಭಾರತೀಯ ವಿಜ್ಞಾನಿಗಳು ಕಂಡುಹಿಡಿದಿದ್ದಾರೆ. ಈ ಕುಂಕುಮ ಸಾಧನವನ್ನು ಮಹಿಳೆಯರು ಧರಿಸಿದರೆ ಅವರ ಅಂಡಾಶಯದಲ್ಲಿ ಅಂಡಾಣು (ಶುಕ್ರಾಣು) ಉತ್ಪತ್ತಿಯಾದ ದಿನ ಈ ಕೆಂಪು ವರ್ಣದ ಫಿಲ್ಮವು ಊದಾ ಬಣ್ಣಕ್ಕೆ ಬದಲಾಯಿಸುತ್ತದೆ. ಈ ಫಿಲ್ಮ್ ಬಣ್ಣ ಬದಲಾಯಿಸದಿದ್ದರೆ ಆಗ ಸ್ತ್ರೀಯ ಅಂಡಾಶಯದಲ್ಲಿ ಅಂಡಾಣು ಉತ್ಪತ್ತಿಯಾಗಿಲ್ಲವೆಂದು ತಿಳಿಯಬೇಕು. ಒಂದು ವೇಳೆ ಊದಾ ಬಣ್ಣಕ್ಕೆ ಬದಲಾಯಿಸಿದರೆ ಸ್ತ್ರೀಯ ಅಂಡಾಶಯದಲ್ಲಿ ಅಂಡಾಣು ಉತ್ಪತ್ತಿಯಾಗಿದೆ. ಮುಂದಿನ ಮೂರು ನಾಲ್ಕು ದಿನ ಗರ್ಭನಿಲ್ಲುವ "ಅಪಾಯದ" ಸಂಭವ ಇದೆ ಎಂದು ದಂಪತಿಗಳು ಎಚ್ಚರಿಕೆ ವಹಿಸಬೇಕು.

ಸಾಮಾನ್ಯವಾಗಿ ಮಾನವನ ದೇಹದ ಉಷ್ಣಾಂಶದಲ್ಲಿ ನಿರ್ದಿಷ್ಟ ಬದಲಾವಣೆಯಾದಾಗ ಈ ಫಿಲ್ಮ್ ತನ್ನ ಬಣ್ಣ ಬದಲಾಯಿಸುತ್ತದೆ. ಸ್ತ್ರೀ ಅಂಡಾಶಯದಲ್ಲಿ ಅಂಡಾಣು ಉತ್ಪತ್ತಿಯಾದಾಗ ದೇಹದ ಉಷ್ಣಾಂಶ ೩೬.೯° ಸೆಂಟಿಗ್ರೇಡನಿಂದ ೩೭.೯° ಸೆಂಟಿಗ್ರೇಡದವರೆಗೆ ಏರುತ್ತದೆ. ಇದರ ಬಳಕೆಯನ್ನು ಕುಟುಂಬ ಯೋಜನಾ ತಜ್ಞರು ಈಗ ಪ್ರಯೋಗಿಸಿ ಪರೀಕ್ಷಿಸುತ್ತಿದ್ದಾರೆ. ಈ ಕುಂಕುಮ ಸಾಧನವನ್ನು L.C.T.D.

ಸ್ತ್ರೀಯರು ತಮ್ಮ ದೇಹದ ಯಾವ ಭಾಗದಲ್ಲಾದರೂ ಧರಿಸ ಬಹುದು. ಕೆಂಪು ಬಣ್ಣಕ್ಕಿರುವ ಈ ಫಿಲ್ಮ್‌ನ್ನು ಸಣ್ಣಗೆ ವರ್ತು ಲಾಕಾರದಲ್ಲಿ ಕತ್ತರಿಸಿ ಕುಂಕುಮಕ್ಕೆ ಬದಲು ಮುಖದಲ್ಲಿ ಧರಿಸಿ ಕೊಳ್ಳಬಹುದು. ಇದು ಕುಂಕುಮಕ್ಕೆ ಮಾತ್ರವೇ ಬದಲಿ ಸ್ಥಾನ ವಲ್ಲ, ಅಂಡೋತ್ಪತ್ತಿಯ ಬಗ್ಗೆ ಮೂ ಸುಳಿವನ್ನು ನೀಡುವ ಸಾಧನ ವಾಗಬಲ್ಲದು.

ಈ ಸಾಧನವನ್ನು ವ್ಯಾಪಾರಿ ಉದ್ದೇಶದಿಂದ ತಯಾರಿಸಿ ದಾಗ ಇದರ ಬೆಲೆ ಪ್ರತಿ ಕುಂಕುಮದಷ್ಟು ಅಗಲಕ್ಕೆ ೨೦ ಪೈಸೆ ಯಾಗಬಹುದು ಪ್ರೊ. ವಿ ಜಿ. ಭಿಡೆ ಮತ್ತು ಅವರ ಸಹೋ ದ್ಯೋಗಿಗಳಾದ ಸುಭಾಸಚಂದ್ರ, ಎಸ್. ಸಿ. ಜೈನ ಅವರು ಅಭಿವೃದ್ಧಿ ಪಡಿಸಿದ ಈ ಸಾಧನವನ್ನು ಪಶುಗಳಲ್ಲಿ ಕೃತಕ ಗರ್ಭ ಧಾರಣೆ ಮಾಡಿಸುವದಕ್ಕೂ, ಸೂಕ್ತ ಕಾಲ ತಿಳಿಯುವದಕ್ಕಾಗಿ ಬಳಸಬಹುದು ಎಂದಿದ್ದಾರೆ.

೧೯೭೩-೭೪ ಸಾಲಿನಲ್ಲಿ ೯೫%ರಷ್ಟು ಜನರು ನಿರೋಧ ಬಳಕೆಗೆ ಮನವೊಲಿದವರಾಗಿದ್ದರು. ಇನ್ನುಳಿದ ೫% ಜನರು ಜೆಲ್ಲಿ, ನೊರೆಗುಳಿಗೆ, ನುಂಗುವ ಗುಳಿಗೆ ಮತ್ತು ಡಯಾಫ್ರಂ ಮುಂತಾದ ತಾತ್ಕಾಲಿಕ ಸಾಧನಗಳನ್ನು ಉಪಯೋಗಿಸಿದ್ದಾ ರೆಂದು ತಿಳಿದುಬಂದಿದೆ. ಇವುಗಳ ಫಲವಾಗಿ ೧೮.೭ ದಶಲಕ್ಷ ಜೀವಿಗಳ ಜನನ ತಡೆದಂತಾಯಿತು.

ಲೂಪ್ ಅಥವಾ ವಂಕಿಧಾರಣೆ (ಸ್ತ್ರೀಯರಿಗಾಗಿ) : ಇದೊಂದು ಸರಳ ಹಾಗೂ ಸುರಕ್ಷಿತ ಗರ್ಭ ನಿರೋಧಕ

ಸಾಧನವು ಇದು ಸ್ತ್ರೀಯರಿಗೆ ಹೆಚ್ಚು ಮೆಚ್ಚುಗೆಯಾಗಿದೆ 'S' (ಎಸ್) ಆಕಾರದಲ್ಲಿರುವ ಈ ಪ್ಲಾಸ್ಟಿಕ ಗರ್ಭ ನಿರೋಧಕವು, ವಂಕಿ ಎಂಬ ಹೆಸರಿನಿಂದ ಜನಪ್ರಿಯವಾಗಿದೆ ಈ ಪ್ಲಾಸ್ಟಿಕ್ ವಂಕಿಯನ್ನು ಮಹಿಳಾ ವೈದ್ಯರು ಆಸ್ಪತ್ರೆಯಲ್ಲಿ ಉಚಿತವಾಗಿ ಸ್ತ್ರೀಯರ ಗರ್ಭಾಶಯದೊಳಗೆ ಕೂಡಿಸುತ್ತಾರೆ. ಈ ಸಾಧನವನ್ನು ಮೊದಲನೆಯ ಶಿಸು ಜನನದ ನಂತರ ಆಳವಡಿಸಿಕೊಳ್ಳುವದು ಯೋಗ್ಯವು ಇದು ಸ್ಥಾನಪಲ್ಲಟವಾಗದಿರುವ ವರೆಗೆ ಮತ್ತಿನ್ಯಾವ ಗರ್ಭನಿರೋಧಕ ವಿಧಾನಗಳನ್ನು ಅಳವಡಿಸಿಕೊಳ್ಳಬೇಕಾಗಿಲ್ಲ. ಇದರ ಬಳಕೆ ಅತ್ಯಂತ ಪರಿಣಾಮಕಾರಿಯಾಗಿದೆ ವಂಕಿ ಅಥವಾ ಲೂಪ್ ಧರಿಸಿದಾಗಲೂ ಗರ್ಭಧಾರಣೆಯಾದ ನಿದರ್ಶನಗಳಿವೆ. ಇಂತಹ ಘಟನೆಗಳು ಅಪರೂಪವಾದವು. ಹೀಗೆ ಜನಿಸುವ ಮಕ್ಕಳು ಎಲ್ಲಾ ರೀತಿಯಲ್ಲೂ ಇತರ ಮಕ್ಕಳಂತೆ ಇರುತ್ತಾರೆ. ಲೂಪ್ ಧರಿಸಿದ ಸ್ತ್ರೀಯಳು ಮತ್ತೊಂದು ಮಗು ಬೇಕೆನಿಸಿದಾಗ ವಂಕಿಯನ್ನು ಗರ್ಭಕೋಶದಿಂದ ಸುಲಭವಾಗಿ ತೆಗೆದು ಶಿಶು ಜನನದ ನಂತರ ಮತ್ತೆ ವಂಕಿಯನ್ನು ಧರಿಸಿಕೊಳ್ಳಬಹುದು. ಇದರ ಅಳವಡಿಕೆಯಿಂದ ಸ್ತ್ರೀಗೆ ದಾಂಪತ್ಯ ಸುಖದಲ್ಲಿ ಭಾದಕವಾಗುವದಿಲ್ಲ. ಈ ಸಾಧನವು ಶಿಶುವಿನ ಜನನದ ಅಂತರವನ್ನು (ಅವಧಿಯನ್ನು) ಸಾಧಿಸುವದರಲ್ಲಿ ಅತ್ಯಂತ ಪರಿಣಾಮಕಾರಿಯಾಗಿದೆ. ಒಮ್ಮೆ ಸೇರಿಸಿದ ಲೂಪ್ ಎಷ್ಟು ಕಾಲಬೇಕಾದರೂ ತನ್ನ ಸ್ಥಳದಲ್ಲಿದ್ದುಕೊಂಡು ಗರ್ಭಧಾರಣೆಯನ್ನು ನಿರೋಧಿಸುತ್ತದೆ. ಬಹು ಅಪರೂಪ ಸಂದರ್ಭಗಳಲ್ಲಿ ಮಾತ್ರ ಲೂಪ್ ಧರಿಸಿದ ಮಹಿಳೆಯರು

ಗರ್ಭವತಿಯರಾಗಬಹುದು. ಗರ್ಭಕೋಶದಲ್ಲಿ ಬೆಳೆಯುತ್ತಿರುವ ಮಗುವಿಗೆ ಯಾವದೇ ರೀತಿಯಲ್ಲಿ ಆತಂಕವಾಗುವದಿಲ್ಲ. ವಂಕಿಯು ಗರ್ಭಕೋಶದ ಹೊರಭಾಗದಲ್ಲಿದ್ದು— ಗರ್ಭದ ಸುರಕ್ಷಿತ ಕೋಶ ಮತ್ತು ಗರ್ಭಕ್ಕೆ ಅಡ್ಡಗೋಡೆಯಾಗುತ್ತದೆ. ಆದ್ದುದರಿಂದ ಹುಟ್ಟುವ ಮಗುವಿಗೆ ತೊಂದರೆ ಇರುವದಿಲ್ಲ. ಪ್ರಸೂತಿಯೊಂದಿಗೆ ಹೊರಬರುವ ಕಶ್ಮಲಗಳೊಂದಿಗೆ ಲೂಪ್ ಸಹ ಹೊರಬರುತ್ತದೆ.

ಪ್ರಪಂಚದಾದ್ಯಂತ ವೈದ್ಯರು ಕುಟುಂಬಯೋಜನೆಯ ಸಾಧನಗಳಲ್ಲಿ ಲೂಪ್ ಅಥವಾ ವಂಕಿಯು ಉತ್ತಮ ಹಾಗೂ ಸುರಕ್ಷಿತವೆಂದು ಬಗೆದಿದ್ದಾರೆ. ಭಾರತದಲ್ಲಿಯೂ ಕೂಡ ಶಾಸ್ತ್ರೀಯವಾಗಿ ವೈದ್ಯಕೀಯ ಸಂಶೋಧನಾ ಮಂಡಳಿಯಲ್ಲಿ ಎರಡು ವರ್ಷಗಳವರೆಗೆ ಲೂಪ್ ಅಥವಾ ವಂಕಿಯನ್ನು ಪರೀಕ್ಷಿಸ ಲಾಯಿತು. ಜುಲೈ ೧೯೬೫ರ ವರೆಗೆ ಜನಸಾಮಾನ್ಯರ ಉಪ ಯೋಗಕ್ಕೆ ಲೂಪ್‌ನ್ನು ಪ್ರಚಾರ ಪಡಿಸಿದಂದಿನಿಂದ ಸುಮಾರು ೩೦ ಲಕ್ಷ ಮಹಿಳೆಯರು ಧರಿಸಿಕೊಂಡು ತಮ್ಮ ಕುಟುಂಬವನ್ನು ಮಿತಗೊಳಿಸಿದ್ದಾರೆ. ಒಂದು ವೇಳೆ ಸತಿಯು ಲೂಪ್ ಧರಿಸಿದ್ದರೆ ಪತಿಯು ಗರ್ಭನಿರೋಧಕ ಇತರ ಸಾಧನಗಳನ್ನು ಉಪಯೋಗಿಸ ಬೇಕಿಲ್ಲ. ಆದುದರಿಂದ ಮಹಿಳೆಯರು ಯಾವದಾದರೂ ಕುಟುಂಬ ಕಲ್ಯಾಣ, ಕೇಂದ್ರವಲ್ಲಿ ಅಥವಾ ಆಸ್ಪತ್ರೆಗಳಲ್ಲಿ ಲೂಪ್‌ನ್ನು ಉಚಿತವಾಗಿ ಜೋಡಿಸಿಕೊಳ್ಳಬಹುದು. ಲೂಪ್ ವನ್ನು ಅಳವಡಿಸಿಕೊಳ್ಳುವದಕ್ಕೆ ಹಣ ಕೊಡಬೇಕಾಗಿಲ್ಲ, ಅಲ್ಲದೆ ಲೂಪ್ ಧರಿಸುವ ಮಹಿಳೆಗೆ ಯೋಗ್ಯ ಬಹುಮಾನ ಹಣವನ್ನು

ದಾರಿ ಖರ್ಚಿಗೆಂದು ಸರಕಾರದ ವತಿಯಿಂದ ಕೊಡಲಾಗುವದು. ಗ್ರಾಮಾಂತರಗಳಲ್ಲಿಯೇ ಆಗಲಿ, ಪಟ್ಟಣಗಳಲ್ಲಿಯೇ ಆಗಲಿ ಜನರು ಗರ್ಭನಿರೋಧಕ ಸೌಕರ್ಯ ತಮಗೆ ಅವಶ್ಯವಿದೆ ಎಂದು ತಿಳಿಸಿದರೆ, ಲೂಪ್ ಅಳವಡಿಸಿಕೊಳ್ಳಲು ಅವರಿದ್ದಲ್ಲಿಗೆ ಹೋಗಿ ಸೇವೆ ಮಾಡುವ ಸಂಚಾರಿ ಶಾಖೆಯು ಇದೆ. ೧೯೭೬ರ ವರೆಗೆ ಭಾರತದಲ್ಲಿ ಪ್ರತಿವರ್ಷ ಒಂದು ಕೋಟಿ ಮೂವತ್ತು ಲಕ್ಷ ಸ್ತ್ರೀಯರಿಗೆ ಲೂಪ್ ಧರಿಸುವ ಭರವಸೆ ಇದೆ ಎಂದು ಅಂದಾಜು ಮಾಡಲಾಗಿದೆ.

ವಂಕಿ ಅಥವಾ ಲೂಪ್ ಧರಿಸಿದ ಮಹಿಳೆಯರಲ್ಲಿ ಕೆಲವರಿಗೆ ಬೆನ್ನು ನೋವು, ರಕ್ತಸ್ರಾವ, ಹೆಚ್ಚಿನ ಋತುಸ್ರಾವ ಅಥವಾ ಸ್ನಾಯು ಹೊಡೆತದ ಲಕ್ಷಣ ತೋರಿಬಂದರೂ ಸುಧಾರಿಸಿದ, ಸುರಕ್ಷಿತ ಆರೋಗ್ಯ ಪಡೆದುಕೊಂಡಿದ್ದಾರೆ. ವೈದ್ಯಕೀಯ ಪರೀಕ್ಷೆಯು ನೇರೆಗೆ ಲೂಪ್ ಧಾರಣದಿಂದ (Cancer) ಏಡಿ ಹುಣ್ಣು ರೋಗ ತಗಲುವದಿಲ್ಲ ಎಂದು ಸಿದ್ಧಪಡಿಸಿದ್ದಾರೆ. ಇಂತಹ ಪರಿಸ್ಥಿತಿಗಳಲ್ಲಿ ಸ್ತ್ರೀಯರಲ್ಲಿ ವಂಕಿ ಧರಿಸುವದರಿಂದ ಬಹುದೂರವಿರುವ ಕಲ್ಪನೆ ಮೂಡಿಸುವದು ಸರಿಯಲ್ಲ. ಅದಕ್ಕಾಗಿ ಯೋಗ್ಯವಾದ ತಿಳಿವಳಿಕೆ ಮಾಡಿಕೊಡುವದು ವೈದ್ಯರ ಕರ್ತವ್ಯವಾಗಿದೆ

೧೯೭೩-೭೪ ಸಾಲಿನಲ್ಲಿ ೧೩೮,೦೦೦ ಮಹಿಳೆಯರು ವಂಕಿ ಧರಿಸಿಕೊಂಡಿದ್ದಾರೆ. ಐದನೆಯ ಪಂಚವಾರ್ಷಿಕ ಯೋಜನೆಯಲ್ಲಿ ನಿಗದಿ ಮಾಡಲ್ಪಟ್ಟ ೫೧೬ ಕೋಟಿ ರೂಪಾಯಿಗಳ

ವೆಚ್ಚವನ್ನು ೧೮ ದಶಲಕ್ಷ ರೂಪಾಯಿಗಳು ವಂಧ್ಯಾಕರಣಕ್ಕಾಗಿ. ೫.೯ ದಶಲಕ್ಷ ರೂಪಾಯಿಗಳು ಲೂಪ್ ಧರಿಸುವ ಮತ್ತು ೮.೮ ದಶಲಕ್ಷ ರೂಪಾಯಿಗಳು ತಾತ್ಪೂರ್ತಿಕ ಸಾಧನಗಳ ತೈಯಾರಿಕೆಗೆ ವಿನಿಯೋಗಿಸಲು ನಮ್ಮ ಸರಕಾರವು ತೀರ್ಮಾನಿಸಿದೆ.

ಸ್ಪಂಜು ಅಥವಾ ಹತ್ತಿ ಒಡೆಯ ಉಪಯೋಗ (ಸ್ತ್ರೀಯರಿಗಾಗಿ) : ಈ ಸಾಧನವನ್ನು ಮೊಟ್ಟಮೊದಲಿಗೆ ಲಂಡನ್ನಿನ ಪ್ರಖ್ಯಾತ ಮಹಿಳಾ ವೈದ್ಯ ಮೇರಿ ಸ್ಟೋಪ್ಸ ಎಂಬಾಕೆಯು ಕಂಡುಹಿಡಿದಳು. ಇದು ಬಡಜನರಿಗಾಗಿ ಸುಲಭವಾಗಿ ಮನೆಯಲ್ಲಿ ಸಿದ್ಧಮಾಡಲು ಒಪ್ಪುವ ಉತ್ತಮ ಉಪಾಯ ಎಂದು ಇವರು ಸಾರಿದ್ದಾರೆ.

ಈ ಸಾಧನವನ್ನು ಎಣ್ಣೆಯಲ್ಲಿ ಅದ್ದಿದ ಹತ್ತಿಯ ಮುದ್ದೆಯಿಂದ ಅಥವಾ ಸ್ಪಂಜಿನಿಂದ ಪುರುಷರ ಸಂಪರ್ಕಕ್ಕೆ ಮೊದಲು ಸ್ತ್ರೀಯರು ಯೋನಿಯೊಳಗೆ ಗರ್ಭದ್ವಾರವನ್ನು ಆವರಿಸಿಬಿಡುವಂತೆ ಮಾಡಲಾಗುವದು. ಈ ಸಾಧನವನ್ನು ತಯಾರು ಮಾಡಬೇಕಾದರೆ ಒಂದು ಮುಷ್ಟಿ ಹತ್ತಿಯನ್ನು ಚೆನ್ನಾಗಿ ಸ್ವಚ್ಛಗೊಳಿಸಿ ಅಂಗೈಯಷ್ಟು ದಪ್ಪ ಹಾಗು ಅಗಲವಾದ ಒಡೆಯಾಕಾರವಾಗಿ ಸಿದ್ಧಮಾಡಿಕೊಳ್ಳಬೇಕು. ನಂತರ ಜೇಡನ ಬಲೆಯಾಕಾರವಾಗಿ ಉಂಡಿಯನ್ನು ಅಡ್ಡವಾಗಿ ನೂಲಿನಿಂದ ಹೊಲಿದು ಹತ್ತಿಯು ಜಾರದಂತೆ ಮಾಡಿಕೊಳ್ಳಬೇಕು. ನಂತರ ಒಂದು ಮೆತ್ತನ್ನ ಉತ್ತಮವಾದ ಬಟ್ಟೆ ಚೀಲವನ್ನು

ಮೊದಲೇ ದುಂಡಾಕಾರವಾಗಿ ಒಂದು ಮುಖವನ್ನು ಟ್ಟುಕೊಂಡು ಅದರೊಳಗೆ ಈ ಹತ್ತಿಯ ಒಡೆಯನ್ನು ಸೇರಿಸಿಬಿಡಬೇಕು. ಈ ಉಂಡೆಯನ್ನು ಹೊರಗೆ ಸೆಳೆಯಲು ಒಂದು ಉದ್ದವಾದ ದಾರ ವನ್ನು ಕಲ್ಪಿಸಿಕೊಳ್ಳಬೇಕು. ಬಳಿಕ ಸ್ತ್ರೀಯಳು ತಾನು ಅಡುಗೆ ಯಲ್ಲಿ ಉಪಯೋಗಿಸುವ ಒಳ್ಳೆಣ್ಣೆ (ಕುಸುಬೆ ಎಣ್ಣೆ) ಯಲ್ಲಿ ಈ ಉಂಡೆಯ ಚೀಲವನ್ನು ನೆನೆಸಿಕೊಳ್ಳಬೇಕು. ವಿಶೇಷವಾದ ಎಚ್ಚರಿಕೆ ಏನೆಂದರೆ ಸಾಸಿವೆ ಎಣ್ಣೆಯ ಉಪಯೋಗ ಮಾಡ ಬಾರದು ಅದಕ್ಕೆ ಬದಲಾಗಿ ಎಳ್ಳೆಣ್ಣೆ, ಕೊಬ್ಬರಿ ಎಣ್ಣೆ ಇದ್ದರೆ ಸರಿ. ನಂತರ ಅದನ್ನು ಮೆದುವಾಗಿ ಹಿಂಡಿ ತಾನು ಮಲಗುವ ಮುನ್ನ ತನ್ನ ಯೋನಿ ಮಾರ್ಗದ ತೀರ ಒಳಭಾಗದಲ್ಲಿ ಬೆರಳುಗಳಿಂದ ಸೇರಿಸಿಕೊಂಡು ಅಲ್ಲಿ ಆ ಹತ್ತಿಯ ಒಡೆಯನ್ನು ಅಗಲವಾಗಿ ಬಿಡಿಸಿ ಗರ್ಭಕೋಶದ್ವಾರವನ್ನು ಮುಚ್ಚುವಂತೆ ಸರಿಪಡಿಸಿ ಕೊಳ್ಳಬೇಕು. ಇನ್ನುಮೇಲೆ ಆ ಹತ್ತಿ ಒಡೆಯು ಹಾಗೂ ಎಣ್ಣೆಯು ಸಂಭೋಗ ತೃಪ್ತಿ ಕೊಡುತ್ತ ಪುರುಷನಿಂದ ಸ್ಖಲಿತ ವಾದ ವಿರ್‍ಯಾಣುಗಳಿಗೆ ಗರ್ಭಕೋಶಕ್ಕೆ ಹೋಗದಂತೆ ತಡೆಹಿಡಿಯು ತ್ತದೆ. ಸಂಪೂರ್ಣರಾತ್ರಿ ಕಳೆದನಂತರ ಮುಂಜಾನೆ ಅದನ್ನು ತೆಗೆದು ಒಳಗಿನ ಹತ್ತಿ ಮಾತ್ರ ತೆಗೆದು ಎಸೆಯಬೇಕು ಇಲ್ಲವೆ ಸುಟ್ಟು ಹಾಕಬೇಕು. ಪುನ ಉಪಯೋಗಕ್ಕಾಗಿ ಬೇಕಾಗುವ ಚೀಲವನ್ನು ನೀರಿನಲ್ಲಿ ಕುದಿಸಿ ಶುದ್ಧಗೊಳಿಸಬೇಕು. ಹತ್ತಿಯನ್ನು ಸುಡುವಂತೆ ಸ್ಪಂಜನ್ನು ಸುಡಬೇಕಾದ ಪ್ರಮೇಯವಿಲ್ಲ. ಮುಖ್ಯವಾಗಿ ಎಣ್ಣೆಯು ವೀರ್‍ಯಾಣುಗಳ ಶಕ್ತಿಯನ್ನು ಕುಗ್ಗಿಸಿ ಮುಂದೆ ಜಾರಿ ಗರ್ಭಕೋಶ ಸೇರದಂತೆ ಮಾಡುತ್ತದೆ. ಕೆಲ

ಯೊಡನೆ ಸಮಾಗಮ ಹೊಂದಿಕೊಂಡು ಗರ್ಭಧಾರಣೆ ಹೊಂದಿದ ಸತಿಯ ಮೇಲೆ ವಿನಾಕಾರಣ ಸಂಶಯದಿಂದ ಅಲ್ಲೋಲಿ ಕಲ್ಲೋಲಕ್ಕೊಳಗಾದ ದೃಷ್ಟಾಂತಗಳಿವೆ. ಅದಕ್ಕಾಗಿ ಮೇಲೆ ವಿವರಿಸಿದ ಕಾರಣಗಳಿಂದಾದ ಸಂಶಯ ಶಮನಕ್ಕೆ ವೈದ್ಯರ ಸೂಕ್ತ ಸಲಹೆಗಳೇ ಸಾಕು.

ಇಲ್ಲಿಯವರೆಗೆ ಭಾರತದಲ್ಲಿ ೫೭ ಲಕ್ಷ ಗಂಡಸರು ವ್ಯಾಸಕ್ಟಮಿ ಚಿಕಿತ್ಸೆ ಮಾಡಿಸಿಕೊಂಡಿರುವರು. ಇತ್ತೀಚಿನ ಸಾಮೂಹಿಕ ಸಂತಾನ ಹರಣ ಚಿಕಿತ್ಸೆಗೆ ಒಳಗಾದ ಗಂಡಸರಿಗೆ ಯೋಗ್ಯ ಸೌಲಭ್ಯಗಳು ಮತ್ತು ಧನಸಹಾಯಗಳಿಂದ ಪ್ರೋತ್ಸಾಹ ಕೊಡುತ್ತಲಿದೆ ನಮ್ಮ ಸರಕಾರ. ಈ ಸಾಮೂಹಿಕ ಶಸ್ತ್ರಚಿಕಿತ್ಸೆ ಶಿಬಿರಗಳಲ್ಲಿ ನುರಿತ ವೈದ್ಯರು, ಅಭಿವೃದ್ಧಿ ಕ್ಷೇತ್ರಾಧಿಕಾರಿಗಳು, ಆರೋಗ್ಯ, ಕಂದಾಯ ಮತ್ತು ಸಾರಿಗೆ ಇಲಾಖೆ ಸಿಬ್ಬಂದಿಯವರ ಸಹಕಾರದೊಂದಿಗೆ ಯಶಸ್ಸು ಸಿಗುತ್ತಲಿದೆ. ಭಾರತದಾದ್ಯಂತ ಇಂತಹ ಗಂಡಸರ ಸಾಮೂಹಿಕ ಸಂತಾನಹರಣ ಶಸ್ತ್ರ ಚಿಕಿತ್ಸೆ ಶಿಬಿರಗಳು ಇನ್ನೂ ಹೆಚ್ಚು ಪ್ರಮಾಣದಲ್ಲಿ ನೆರವೇರಬೇಕು. ೧೯೭೨–೭೩ ಸಾಲಿನಲ್ಲಿ ನಡೆಸಲಾದ ಗಂಡಸರ ಸಾಮೂಹಿಕ ಸಂತಾನಹರಣ ಶಸ್ತ್ರಚಿಕಿತ್ಸೆಯಲ್ಲಿ ನಿಗದಿ ಮಾಡಲ್ಪಟ್ಟ ೧೦,೦೦೦ ಗುರಿಯನ್ನು ದಾಟಿ ೧೭,೫೪೨ ಜನರು ಈ ಚಿಕಿತ್ಸೆ ಮಾಡಿಸಿಕೊಂಡು, ಬೀದರ ಜಿಲ್ಲೆಯು ಭಾರತದಲ್ಲಿ ಪ್ರಥಮ ಸ್ಥಾನಪಡೆದಿದೆ ಈ ಪ್ರಮಾಣವು ಪ್ರತಿ ಸಾವಿರ ಜನಕ್ಕೆ ೨೧.೩, ಎಂದು ಅಂದಾಜುಮಾಡಲಾಗಿದೆ. ಉಳಿದ ಜಿಲ್ಲೆಗಳಾದ ಬೆಂಗಳೂರು ಪ್ರತಿ ಸಾವಿರಕ್ಕೆ ೦.೩, ಗುಜರಾತದ ಪಂಚಮಹಲ ಜಿಲ್ಲೆ

ಮತ್ತು ಪಂಜಾಬದ ಸಂಗರೂರು ಜಿಲ್ಲೆಯಲ್ಲಿ ೧.೫ ಕೊನೆಯದಾಗಿ ಬಿಹಾರದ ಮೊಂಗ್ಯೇರದಲ್ಲಿ ೧.೬ ಪ್ರಮಾಣದಲ್ಲಿ ಗಂಡಸರು ಈ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡಿದ್ದಾರೆ.

ಟ್ಯುಬೋಕ್ಟಮಿ (ಸ್ತ್ರೀಯರಿಗಾಗಿ ವಂಧ್ಯಾಕರಣ ಚಿಕಿತ್ಸೆ) : ಈ ವಂಧ್ಯಾಕರಣ ಚಿಕಿತ್ಸೆಯು ಮಹಿಳೆಯರಿಗಾಗಿ ಮೀಸಲಾದದ್ದಾಗಿದೆ. ಈ ಸಂತಾನಹರಣ ಚಿಕಿತ್ಸೆಗೆ ಒಳಗಾಗುವ ಸ್ತ್ರೀಯಳ ಗರ್ಭಕೋಶಕ್ಕೆ ಶುಕ್ರಾಣುವನ್ನು ಸಾಗಿಸುವ ಡಿಂಬ ನಾಳದ ಭಾಗವನ್ನು ಕತ್ತರಿಸಿಬಿಡುತ್ತಾರೆ. ಇದರ ಫಲವಾಗಿ ಪ್ರತಿ ಮಾಸದಲ್ಲಿ ಉತ್ಪತ್ತಿಯಾದ ಶುಕ್ರಾಣುವು ಗರ್ಭಕೋಶಕ್ಕೆ ಸಾಗುವದಿಲ್ಲ. ಟ್ಯುಬೆಕ್ಟಮಿ ಶಸ್ತ್ರ ಚಿಕಿತ್ಸೆಗೆ ಒಳಗಾದ ಸ್ತ್ರೀಯಳು ಆಸ್ಪತ್ರೆಯಲ್ಲಿ ೮-೧೦ ದಿವಸಗಳವರೆಗೆ ಔಷಧೋಪಚಾರ ಪಡೆಯಬೇಕಾಗುತ್ತದೆ. ಇದು ಸ್ತ್ರೀಯರಿಗೆ ಮುಂದೆ ಮಕ್ಕಳೇ ಬೇಡ ಎಂಬ ಬಯಕೆಗೆ ಸುರಕ್ಷಿತ ಹಾಗೂ ಸುಲಭವಾದ ಸಾಧನವಾಗಿದೆ. ಆದರೆ ಈ ಶಸ್ತ್ರ ಚಿಕಿತ್ಸೆಯು ಗಂಡಸರಿಗೆ ಮಾಡುವ ವ್ಯಾಸೆಕ್ಟಮಿ ಶಸ್ತ್ರ ಚಿಕಿತ್ಸೆಯಷ್ಟು ಸುಲಭ ಹಾಗೂ ಅಲ್ಪ ಸಮಯದ್ದಲ್ಲ.

ಈ ಚಿಕಿತ್ಸೆ ಪಡೆದನಂತರ ಸ್ತ್ರೀಯರಿಗೆ ಯಥಾಪ್ರಕಾರ ಮಾಸಿಕಧರ್ಮವಾಗುವದು. ಅಷ್ಟೇ ಅಲ್ಲ ಲೈಂಗಿಕ ಬಯಕೆ ಮತ್ತು ತೃಪ್ತಿಗೆ ಯಾವ ಭಯ, ತೊಂದರೆಯುಂಟಾಗುವದಿಲ್ಲ. ೧೯೬೧ ಅಕ್ಟೋಬರದ ವರೆಗೆ ೧೩ ಲಕ್ಷ ಮಹಿಳೆಯರು ಈ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡಿದ್ದಾರೆ. ೧,ಎಪ್ರಿಲ್ ೧೯೭೩ರ ಅವಧಿ

ಸಾಧನವಾಗಿದೆ. ಈ ಸಾಧನವನ್ನು ಸಕಲ ವೈದ್ಯಕೀಯ ಸಲಕರಣೆಗಳನ್ನು ಹೊಂದಿದ ಋಗ್ಣಾಲಯದಲ್ಲಿ ನುರಿತ ಡಾಕ್ಟರರು, ಪರಿಣತ ಮಹಿಳಾ ವೈದ್ಯರು ಸಹಕರಿಸಿ ನೂರಕ್ಕೆ ನೂರರಷ್ಟು ಯಶಸ್ವಿಗೊಳಿಸುತ್ತಿದ್ದಾರೆ.

ಭಾರತದಲ್ಲಿ ಸಾವಿರಾರು ವರ್ಷಗಳಿಂದಲೂ ಸ್ತ್ರೀ ವರ್ಗವು ಜಾತಿ ಮತ ಪಂಥ ಮತ್ತು ವರ್ಣಭೇದವರಿಯದೆ ಜೀವಮಾನದಲ್ಲಿ ಒಂದೆರಡು ಬಾರಿಯಾದರೂ ಪ್ರತ್ಯಕ್ಷವಾಗಿ ಇಲ್ಲವೆ ಗುಪ್ತವಾಗಿ ಗರ್ಭಪಾತದ ಅನುಭವ ಪಡೆಯುತ್ತಿದೆ. ಆದರೆ ಅವರಲ್ಲಿ ಹಂಗುತೊರೆದು ಗರ್ಭಪಾತ ಮಾಡಿಕೊಳ್ಳುವವರಲ್ಲಿ ಪ್ರಾಣನೀಗಿದವರು ಬಹಳ. ಹಳೆಯ ಗರ್ಭಪಾತ ವಿಧಾನಗಳು ವಿಚಿತ್ರವಾಗಿವೆ. ಗರ್ಭಪಾತಕ್ಕೊಳಗಾಗುವ ಮಹಿಳೆಯರು ಹೊಟ್ಟೆಗೆ ಬಿಗಿಯಾದ ಬಟ್ಟೆ ಸುತ್ತಿಕೊಳ್ಳುವದು, ಎತ್ತರ ಸ್ಥಾನದಿಂದ ಜಿಗಿಯುವದು, ಎಡೆಬಿಡದೆ ತಣ್ಣೀರಿನ ಸ್ನಾನದ ನಂತರ ಬಿಸಿನೀರಿನ ಸ್ನಾನ ಮಾಡುವದರಿಂದ ಪ್ರಬಲವಾದ ದ್ರಾವಣದಲ್ಲಿ ಅದ್ದಿದ ೧೫–೨೦ ಸೆಂಟಿಮೀಟರ ಹತ್ತಿಕೋಲನ್ನು ಗರ್ಭದ್ವಾರಕ್ಕೆ ಮುಟ್ಟಿಸಿಕೊಳ್ಳುವದು ಇತ್ಯಾದಿಗಳಿಂದ ಗರ್ಭಪಾತ ಮಾಡಿಕೊಳ್ಳುತ್ತಿದ್ದರು. ದೇವದಾಸಿಯರು ನಿರಂತರ ಗರ್ಭಧರಿಸಬಾರದೆಂಬ ಬಯಕೆಯಿಂದ 'ಜವಾಕುಸುಮ' ಪುಷ್ಪಗಳನ್ನು ಉಪಯೋಗಿಸುತ್ತಿದ್ದರು. ಸ್ತ್ರೀಯರು, ಪಪ್ಪಾಯಿಕಾಯಿ, ಕರ್ಪುರ, ಹಲಸಿನ ಅಥವಾ ಅನಾನಸ, ಕಹಿಯಾದ ಸೋರೆಕಾಯಿ, ಜಾಜಿಕಾಯಿ, ಲವಂಗ, ಕೇಸರಿ ಸೇವನೆ ಮಾಡಿ ಗರ್ಭಪಾತ ಮಾಡಿಕೊಳ್ಳುತ್ತಿದ್ದರು. ಜಗತ್ತಿನ ಹಲವಾರು

ದೇಶಗಳಲ್ಲಿ ಗರ್ಭಪಾತವು ಒಂದು ಅಪರಾಧನೆಂದು ಪರಿಗಣಿಸ ಲಾಗಿದೆ ಗೋಹತ್ಯೆ, ಸ್ತ್ರೀಹತ್ಯೆ ಮತ್ತು ಶಿಶುಹತ್ಯೆ (ಭ್ರೂಣ ಹತ್ಯೆ) ಇವು ತ್ರಿಪಾತಕಗಳೆಂದು ಬಗೆದು ಭಾರತದಲ್ಲಿ ಈ ಕೃತಿ ಯನ್ನು ಎಸಗಿದವರಿಗೆ ಪಾಪಿ ಎಂದು ಕೀಳು ದೃಷ್ಟಿಯಿಂದ ಕಾಣುತ್ತಾರೆ. ಆದರೂ ಲಕ್ಷಾವಧಿ ಪ್ರಮಾಣದಲ್ಲಿ ಸ್ತ್ರೀಯರು ಗರ್ಭಪಾತ ಮಾಡಿಕೊಳ್ಳುತ್ತ ಬಂದಿದ್ದಾರೆ. ಏಕೆ? ಹೇಗೆ? ಎಂಬುದಕ್ಕೆ ಎಣೆಯಿಲ್ಲ. ಕಾಲಕ್ಕೆ ತಕ್ಕಂತೆ ಸಮಾಜದ ನೈತಿಕ ಮಟ್ಟದ ದೃಷ್ಟಿ, ವ್ಯಕ್ತಿ ದೃಷ್ಟಿ ಹಾಗೂ ರಾಷ್ಟ್ರಧೋರಣೆ ಮುಂತಾದವುಗಳಲ್ಲಿ ಬದಲಾಣೆಯಾಗುತ್ತಿದೆ ಆದರೆ ಯಾವ ಹೆಣ್ಣುಮಗಳೂ ಕೂಡ ಗರ್ಭಪಾತವು ಒಂದು ಆನಂದದ ಅನು ಭವವೆಂದು ಭಾವಿಸುವದಿಲ್ಲ.

ಪ್ಲೇಟೋ, ಅರಿಸ್ಟಾಟಲರು ಜನಸಂಖ್ಯೆಯನ್ನು ಮಿತಿ ಗೊಳಿಸುವವರ ಸಲುವಾಗಿ ಗರ್ಭಪಾತಕ್ಕೆ ಅನುಮತಿ ಅವಶ್ಯ ಬೇಕಾಗುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ರೋಮನ್ ಜನರು ಗರ್ಭಪಾತದ ಹೆಸರಿ ವಿಧಾನವನ್ನು ಅರಿತವರಾಗಿದ್ದರು ಪ್ರಾಚೀನ ಭಾರತದಲ್ಲಿ ಪ್ರಚಾರದಲ್ಲಿದ್ದ ಗರ್ಭಪಾತದ ವಿಧಾನ ಗಳಿಗೆ ಧಾರ್ಮಿಕ ಪ್ರೋತ್ಸಾಹ ಸಿಗದೆ ಪ್ರಚಾರವಾಗಲಿಲ್ಲ. ಇಂದು ಭಾರತೀಯ ಮಹಿಳೆಯರಿಗೆ ಗರ್ಭಪಾತವು ಒಂದು ಮೂಲಭೂತ ಹಕ್ಕು ಎಂದು ಪರಿಗಣಿಸಬೇಕಾಗಿದೆ. ಏಕೆಂದರೆ ಗ್ರಾಮಾಂತರ ಗಳಲ್ಲಿ ಹಾಗು ಪಟ್ಟಣಗಳಲ್ಲಿ ಸ್ತ್ರೀಯರು ಗುಪ್ತರೀತಿಯಿಂದ ಅಳಲೆ ಕಾಯಿ ಪಂಡಿತರ ಅಥವಾ ಹಕೀಮರ ಸಲಹೆ ಪಡೆದು ಗರ್ಭಪಾತ ಮಾಡಿಕೊಳ್ಳುತ್ತ ಬಂದಿದ್ದಾರೆ. ಇದರ ಪರಿಣಾಮವಾಗಿ ಸಾವಿ ರಾರು ಹೆಣ್ಣುಮಕ್ಕಳು ಸಾವಿಗೀಡಾಗಿದ್ದರಿಂದ ಗರ್ಭಪಾತ.

ಕಾಯ್ದೆಯನ್ನು ಸಡಿಲು ಮಾಡಬೇಕಾಯಿತು. ಸೌರೋಜಿ ವಾಡಿಯಾ ಪ್ರಸೂತಿ ರುಗ್ಣಾಲಯ, ಮುಂಬಯಿ ಸಾದರಪಡಿಸಿದ ಅಂಕಿ ಸಂಖ್ಯೆಗಳ ಪ್ರಕಾರ ಭಾರತದಲ್ಲಿ ಪ್ರತಿವರ್ಷ ಹತ್ತು ಸಾವಿರ ಪ್ರಸೂತಿಗಳಲ್ಲಿ ೯%ರಷ್ಟು ನೈಸರ್ಗಿಕವಾಗಿ ಗರ್ಭಪತನವಾದರೆ ಲೆಕ್ಕಕ್ಕೆ ಬರದಂತೆ ಇನ್ನಿತರ ೬%ರಷ್ಟು ಸ್ತ್ರೀಯರು ಗರ್ಭಪತನಕ್ಕೆ ಮನವೊಲಿಕೆ ಹೊಂದಿದವರೆಂದು ಹೇಳಲಾಗಿದೆ ಮದುವೆಯಾಗದ ತಾಯಂದಿರಿಗೆ, ವಿಧವಾ ಗರ್ಭಿಣಿಯರಿಗೆ ಸಮಾಜದಲ್ಲಿ ಸ್ಥಾನಮಾನವಿಲ್ಲ. ಸಮಾಜ ತಮ್ಮನ್ನು ಹೀನ ದೃಷ್ಟಿಯಿಂದ ಕಾಣುವದೆಂಬ ಭಯದಿಂದ ಅಪರಾಧಿತ ಗರ್ಭಪಾತ ಮಾಡಿಕೊಳ್ಳುವರು. ಇಂತೆಲ್ಲ ದುರ್ದೆಶೆಗಳನ್ನು ದೂರೀಕರಿಸಲು ಭಾರತ ಸರಕಾರವು ಗರ್ಭಪಾತದ ಕಟ್ಟಳೆಯನ್ನು ಕಾನೂನು ರೀತ್ಯಾ ಸಡಿಲುಗೊಳಿಸಬೇಕಾಯಿತು. ಗರ್ಭಪಾತವು ಕಾನೂನಿನ ದೃಷ್ಟಿಯಿಂದ ಹೆಣ್ಣುಮಕ್ಕಳ ಮೂಲಭೂತ ಹಕ್ಕು ಎಂದು ಪರಿಗಣಿಸುವದಾದರೆ ಮುಂದೆ ತಿಳಿಸಿದ ಅಂಶಗಳನ್ನು ನೆನಪಿನಲ್ಲಿಟ್ಟುಕೊಳ್ಳಬೇಕು.

ವೈದ್ಯರ ಅಭಿಪ್ರಾಯದಂತೆ ಗರ್ಭಿಣೀ ಸ್ತ್ರೀಗೆ ಪ್ರಾಣಾಪಾಯವಾಗುವ ಪರಿಸ್ಥಿತಿಯಿದ್ದರೆ ಅಥವಾ ಮಾನಸಿಕವಾಗಿ ಇಲ್ಲವೆ ದೈಹಿಕವಾಗಿ ಗಂಡಾಂತರವನ್ನು ಒಡ್ಡುವಂತಿದ್ದರೆ ಆಗ ಸ್ತ್ರೀಯು ಗರ್ಭಪಾತಮಾಡಿಕೊಳ್ಳಲು ಅಡ್ಡಿಯಿಲ್ಲ. ಒಂದು ವೇಳೆ ಹುಟ್ಟುವ ಮಗುವು ತೀವ್ರ ತೊಂದರೆಗೀಡಾಗಿದ್ದರೆ, ಶಾರೀರಿಕವಾಗಿಯಾಗಲೀ, ಮಾನಸಿಕವಾಗಿಯಾಗಲೀ ಅಸಾಮಾನ್ಯ ದೈಹಿಕ ದುಸ್ಥಿತಿಗೊಳಪಡುತ್ತದೆಂದು ಖಚಿತ ಪಟ್ಟರೆ ಅಂಥ ಸಂದರ್ಭ

ಗಳಲ್ಲಿ ಗರ್ಭಪಾತ ಮಾಡಿಸಿಕೊಳ್ಳಲು ಕಾನೂನು ಅವಕಾಶವನ್ನು ಕೊಡಬೇಕು. ಅನೈತಿಕ ಸಂಬಂಧದಿಂದ ಗರ್ಭದಲ್ಲಿ ಬೆಳೆಯುತ್ತಿರುವ ಪಿಂಡಕ್ಕೆ ಗರ್ಭಪಾತಮಾಡಿಸಬಹುದು. ಸಮಾಜದ ಇನ್ನಿತರ ವಿಷಯಗಳಿಗನುಗುಣವಾಗಿ ಕುಟುಂಬದ ಆರ್ಥಿಕ ದೃಷ್ಟಿಯಿಂದಲೇ ಆಗಲೀ ಅಥವಾ ತಾಯಿ ಯಾಗುವವಳು ಅಪ್ರಾಪ್ತ ವಯಸ್ಕಳಾಗಿದ್ದರೆ ಗರ್ಭಪಾತ ಮಾಡಿಸಿಕೊಳ್ಳಬಹುದು. ಗೃಹಭಂಗವಾದಾಗ, ಅಥವಾ ಸಮಾಜದಲ್ಲಿ ಅಗೌರವ ಅಸಾಮಾನ್ಯವಾದ ದುಃಸ್ಥಿತಿ ಬಂದಾಗ ಇಲ್ಲವೆ ಇನ್ನಿತರ ಕಾರಣಗಳಾದ ಮೂತ್ರಪಿಂಡರೋಗ, ಹೃದಯರೋಗ, ಜನನಾಂಗ ಮತ್ತು ಎದೆಗೆ ತಗಲುವ ಏಡಿಹುಣ್ಣು ಭಯವಿದ್ದಾಗ ಅಂಥ ಸ್ತ್ರೀಯರಿಗೆ ಗರ್ಭಪಾತಕ್ಕೆ ಅನುಕೂಲವಿರಬೇಕು.

ಕೊನೆಯದಾಗಿ ವಿವಾಹಿತ ಸ್ತ್ರೀಯರೇ ಗರ್ಭಪಾತ ಮಾಡಿಸಿಕೊಳ್ಳಲು ಆಶೆಯಾಗುವರು. ಏಕೆಂದರೆ ಕೆಲವರಿಗೆ ಒಂದುಸಲ ಸಂತಾನ ಬೇಡವೆನಿಸಬಹುದು ಇಲ್ಲವೆ ಜನಿಸುವ ಶಿಶುವು ದೈಹಿಕ ಮತ್ತು ಮಾನಸಿಕ ನ್ಯೂನತೆ ಹೊಂದುವದೆಂದು ತಿಳಿದುಬಂದರೆ, ಅಥವಾ ಗರ್ಭಾವಸ್ಥೆಯಲ್ಲಿಯೇ ಶಿಶುವು ಮರಣ ಅಥವಾ ರೋಗಪೀಡಿತವಾಗಿದ್ದರೆ, ಗರ್ಭಪಾತ ಅವಶ್ಯವೆನಿಸುವದು. ಒಟ್ಟಿನಲ್ಲಿ ಹೇಳುವದಾದರೆ ಈ ಕಾಯ್ದೆಯು ವೈದ್ಯರಿಗೆ ಭಂಗ ಬರದಂತೆ ಇರಬೇಕು. ಮತ್ತು ದಂಪತಿಗಳಿಗೂ ಭಗ್ನವಾಗದಂತಾಗಬೇಕು. ಆಗ ದಂಪತಿಗಳಿಂದ ಲಿಖಿತ ಅನುಮತಿ ತೆಗೆದುಕೊಂಡು ಗರ್ಭಪಾತ ಮಾಡಿಸುವದು ಒಳ್ಳೆಯದು.

ಒಂದು ವೇಳೆ ಗರ್ಭಿಣಿಯು ಅಪ್ರಾಪ್ತ ವಯಸ್ಕಳು ಅಥವಾ ಉನ್ಮಾದ ಹಿಡಿದವಳಾಗಿದ್ದರೆ ಅಂಥವರಿಂದ ಅನುಮತಿಪಡೆಯು ದಿದ್ದರೆ ಕ್ಷೇಮಕರವು. ವಿಶೇಷವಾಗಿ ಸರಕಾರದಿಂದ ಮಾನ್ಯತೆ ಪಡೆದ ಸಂಸ್ಥೆಗಳಲ್ಲಿ ಅಥವಾ ಸರಕಾರಿ ಆಸ್ಪತ್ರೆಗಳಲ್ಲಿ ಗರ್ಭಪಾತ ಮಾಡಿಸಿಕೊಳ್ಳಬೇಕು. ಗರ್ಭಪಾತ ಮಾಡಿಸುವ ವೈದ್ಯಕೀಯ ಸಂಸ್ಥೆಗಳಲ್ಲಿ ಅರ್ಹತೆ ಪಡೆದ ಡಾಕ್ಟರರು, ನುರಿತ ದಾಯಿಗಳು, ಸೂಲಗಿತ್ತಿಯರು ಮತ್ತು ಅನೇಸ್ಥಿಟಿಸ್ಟರು, ಇದಲ್ಲದೆ ಶಸ್ತ್ರ ಕ್ರಿಯೆಯ ಸಲಕರಣೆಗಳು, I. V. ದ್ರಾವಣಗಳು, ಮತ್ತು ರಕ್ತ ವನ್ನು ಶರೀರಕ್ಕೆ ಸೇರಿಸುವ ಸೌಲಭ್ಯಗಳು ಅವಶ್ಯ ಇರಲೇಬೇಕು ಕನಿಷ್ಠ ಮೂರುದಿನಗಳ ಕಾಲ ಋಗ್ಣಾಲಯದಲ್ಲಿ ಔಷಧೋಪ ಚಾರ ಪಡೆಯಬೇಕಾಗುತ್ತದೆ ಗರ್ಭಧರಿಸಿದ ೧೨ ವಾರಗಳಲ್ಲಿ ಗರ್ಭಿಣಿಗೆ ಈ ಚಿಕಿತ್ಸೆ ಒಳ್ಳೆಯದು. ೧೨ ವಾರಗಳಿಂದ ೨೦ ವಾರಗಳ ಕಾಲ ಬೆಳೆದಪಿಂಡಕ್ಕೆ ಗರ್ಭಪಾತ ಮಾಡಿಸಿಕೊಳ್ಳು ವದು ಬಹು ಪರಿಶ್ರಮವೆನಿಸುವದು. ಆದರೆ ೨೮ ವಾರದ ಗರ್ಭ ಪಿಂಡಕ್ಕೆ ಈ ಚಿಕಿತ್ಸೆಯು ಅಷ್ಟು ಸುಲಭವಲ್ಲ. ಪುನಃ ಪುನ ಗರ್ಭಪಾತ ಮಾಡಿಸಿಕೊಳ್ಳುವ ಸ್ತ್ರೀಯರಿಗೆ ಪ್ರಾಣಾಪಾಯವು- ಏಕೆಂದರೆ ಧೀರ್ಘರಕ್ತಸ್ರಾವ, ಅಶಕ್ತತೆ ಮತ್ತು ರಕ್ತಹೀನತೆ ಮುಂತಾದ ಕಾರಣಗಳಿಂದಾಗಿ ಬೇರೆ ಬೇರೆ ರೋಗಗಳಿಗೆ ಗುರಿ ಯಾಗುವರು. ಆರು ತಿಂಗಳ ಒಳಗಾಗಿ ಪುನ ಗರ್ಭಪಾತ ಮಾಡಿಸಿಕೊಳ್ಳಬಾರದೆಂದು ಸ್ತ್ರೀಯರಿಗೆ ಸಲಹೆಕೊಡಬೇಕು. ಅದಕ್ಕಾಗಿ ಗರ್ಭಿಣಿ ಸ್ತ್ರೀಯು ನಿಜವಾದ ಸ್ಥಿತಿಯನ್ನು ವೈದ್ಯ ಯರಿಗೆ ತಿಳಿಸುವದು ಶ್ರೇಯಸ್ಕರವು.

೪. ಭಾರತದಲ್ಲಿ ಕುಟುಂಬ ಯೋಜನೆಯ ಯಶಸ್ಸು

ಐದನೆಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಜನನ ಪ್ರಮಾಣವನ್ನು ಪ್ರತಿ ಸಾವಿರಕ್ಕೆ ೨೫ ತರುವದು; ಗ್ರಾಮಾಂತರ ಪ್ರದೇಶಗಳಲ್ಲಿ ಆರೋಗ್ಯ ಮತ್ತು ಕುಟುಂಬ ಯೋಜನೆಯ ಕೇಂದ್ರಗಳನ್ನು ೩೨,೨೭೬ ಕ್ಕೆ ಏರಿಸುವದು; ಇವಲ್ಲದೆ ನಗರಗಳಲ್ಲಿ ಕುಟುಂಬ ಕಲ್ಯಾಣ ಕೇಂದ್ರಗಳ ಸಂಖ್ಯೆಯನ್ನು ೧೯೫೨ ಕ್ಕೆ ಏರಿಸುವದು; ಇವು ಉದ್ದೇಶಿತ ಸಾಧನೆಗಳು. ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ೩೩೦ ಕೋಟಿ ರೂಪಾಯಿಗಳನ್ನು ಈ ಕಾರ್ಯಕ್ರಮಕ್ಕೆ ನಿಗದಿ ಮಾಡಲಾಗಿತ್ತು. ಐದನೆಯ ಪಂಚವಾರ್ಷಿಕ ಯೋಜನೆಯಲ್ಲಿ ೫೧೬ ಕೋಟಿ ರೂಪಾಯಿ ವೆಚ್ಚ ಮಾಡಲಾಗುವದು ಹೀಗೆ ಸರ್ವತೋಮುಖ ಅಭಿವೃದ್ಧಿ ದೃಷ್ಟಿಯಿಂದ ಕುಟುಂಬ ಯೋಜನೆಯು ಯಶಸ್ವಿಗಾಗಿ ಕೆಳಕಂಡ ವಿವಿಧ ರೀತಿಗಳಲ್ಲಿ ಹಂತ ಹಂತವಾಗಿ ರೂಪಿಸಲು ನಿರ್ಧರಿಸಲಾಗಿದೆ

(ಅ) ಪಂಚವಾರ್ಷಿಕ ಯೋಜನಾ ಕ್ರಮುಗಳು :

೧) ಕುಟುಂಬಯೋಜನೆಯ ಸೇವಾ ಕಾರ್ಯವನ್ನು ಆರೋಗ್ಯ ಹಾಗೂ ಪ್ರಸೂತಿ ಖಗ್ಣಾಲಯಕ್ಕೆ ಸೇರ್ಪಡಿಸುವದು.

೨) ಯೋಜನೆಗಳನ್ನು ಜಾರಿಗೆ ತರುವಲ್ಲಿ ಯೋಗ್ಯವಾದ ಸಾಮೂಹಿಕ ಹಿನ್ನೆಲೆಯನ್ನು ನಿರ್ಮಾಣ ಮಾಡುವವರ ಸಲುವಾಗಿ ಸಾರ್ವತ್ರಿಕ ಶಿಕ್ಷಣದ ಅವಕಾಶ ಕಲ್ಪಿಸಿಕೊಡುವದು.

೩) ಆರೋಗ್ಯ ಕೇಂದ್ರಗಳ ಮುಖಾಂತರ ಕುಟುಂಬ ನಿಯಂತ್ರಣ ಅವಕಾಶಗಳನ್ನು ಜನಸಾಮಾನ್ಯರಿಗೆ ಒದಗಿಸುವದು ಅಂದರೆ ಸಂತತಿ ನಿಯಂತ್ರಣ ಗುಳಿಗೆ, ನಿರೋಧ, ಡಯಾಫ್ರಂ, ಜೆಲ್ಲಿ ಮತ್ತು ಮಲಾಮು ಪುಕ್ಕಟೆಯಾಗಿ ಎಲ್ಲಾ ಸಾರ್ವಜನಿಕ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮುಖಾಂತರ ಹಂಚುವ ವ್ಯವಸ್ಥೆ ಮಾಡುವದು

೪) ವೈದ್ಯಕೀಯ ಮಹಾ ವಿದ್ಯಾಲಯಗಳಲ್ಲಿ ಕುಟುಂಬ ಯೋಜನೆಗೆ ತರಬೇತಿ ಹಾಗೂ ಜನಸಂಖ್ಯೆ ಶಿಕ್ಷಣದ ಅವಕಾಶವನ್ನು ಕಲ್ಪಿಸಿ ಕೊಡುವದು.

೫) ಎಪ್ರಿಲ್ ೧೯೬೬ ರಿಂದ ಕೇಂದ್ರ ಸರಕಾರದಲ್ಲಿ ಸ್ಥಾಪಿಸಲಾದ ಪ್ರತ್ಯೇಕ ಕುಟುಂಬ ಯೋಜನೆಯ ಶಾಖೆಯು ಕೇಂದ್ರ-ರಾಜ್ಯಗಳ ಕುಟುಂಬ ನಿಯಂತ್ರಣ ಕಾರ್ಯಕಲಾಪಗಳನ್ನು ಕ್ರೋಢೀಕರಿಸುವದು ಒಂದು ಮುಖ್ಯ ಕರ್ತವ್ಯವಾಗಿದೆ. ಇದರಲ್ಲಿ ಭಾರತ ಸರಕಾರವು ಸ್ವಾತಂತ್ರ್ಯವಾದಂದಿನಿಂದ ಅಮೇರಿಕೆಯ ಸರಕಾರದಿಂದ ಸಹಾಯಧನವ P L. 480 ರೂಪದಲ್ಲಿ ಮೂವತ್ತು ಕೋಟಿ ರೂಪಾಯಿಗಳನ್ನು ಕುಟುಂಬ ಯೋಜನೆಗಾಗಿ ಪಡೆದಿದೆ. ಈ ಸಹಾಯಧನವನ್ನು ಕೆಳಗಿನಂತೆ ವಿನಿಯೋಗಿಸಲಾಗಿದೆ:

೧) ಆರು ಕೋಟಿ ರೂಪಾಯಿ ಮತ್ತು ಸಾಲರೂಪದ ಎರಡು ಕೋಟಿ ರೂಪಾಯಿಗಳಿಂದ—ಆರು ಸಾವಿರಕ್ಕಿಂತಲೂ

ಹೆಚ್ಚಿನ ಸಂಖ್ಯೆಯಲ್ಲಿ ವಾಹನಗಳನ್ನು ಕೊಂಡು ಕುಟುಂಬ ಯೋಜನೆಯು ಪ್ರತಿ ಹಳ್ಳಿ ಹಳ್ಳಿಗೂ ತಲುಪುವಂತೆ ಮಾಡಿದೆ.

೨) P. L. 480 ನಿಧಿಯಿಂದ ಒಟ್ಟು ೮೫ ಕೋಟಿ ರೂಪಾಯಿಗಳನ್ನು ಕುಟುಂಬ ಯೋಜನಾ ಕಾರ್ಯಗಳ ವಿಸ್ತೃತ ಪ್ರಯೋಗಗಳಿಗಾಗಿ ಮತ್ತು ಹೊಸ ಹೊಸ ಸಂಶೋಧನೆಗಳಿಗಾಗಿ ವಿನಿಯೋಗಿಸಲಾಗಿದೆ.

೩) ಹದಿನೈದು ಕೋಟಿ ರೂಪಾಯಿಗಳ ಸಹಾಯಧನವನ್ನು ವಿದೇಶಿ ವಿನಿಮಯ ರೂಪದಲ್ಲಿ ೧೯೭೦ ನೇ ಇಸ್ವಿಯವರೆಗೆ ಕುಟುಂಬ ಯೋಜನೆಗಾಗಿ ಮೀಸಲಾಗಿಡಲಾಯ್ತು. ಈ ಹಣವನ್ನು ನಾಲ್ಕನೆಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ವಿನಿಯೋಗಿಸಲಾಯ್ತು.

೪) ೨.೨೫ ಕೋಟಿ ರೂಪಾಯಿಗಳ ಸಹಾಯಧನದಿಂದ ೧೭೦ ದಶಲಕ್ಷ ನಿರೋಧಗಳನ್ನು ನಿರ್ಮಿಸುವ ಯೋಜನೆಯನ್ನು ೧೯೬೮ ಇಸ್ವಿಯ ಅವಧಿಯಲ್ಲಿ ಪೂರ್ತಿಮಾಡಲಾಯ್ತು.

೫) ಭಾರತದಲ್ಲಿ ಸ್ಥಾಪಿತವಾದ ಇಂಟರನ್ಯಾಷನಲ್ ಇನಸ್ಟಿಟ್ಯೂಟ ಆಫ್ ಪಾಪ್ಯುಲೇಷನ್ ಸ್ಟಡೀಜ, ಬೊಂಬಾಯಿ ಸಂಸ್ಥೆಯ ಕಾರ್ಯಕಲಾಪಗಳಿಗಾಗಿ ಸಹಾಯಧನವನ್ನು ಕೊಡಲಾಗಿದೆ.

ಕೊನೆಯದಾಗಿ ಇತ್ತೀಚಿನ ಇಂಡೋ-ಅಮೇರಿಕನ್ ಒಪ್ಪಂದದ ಪ್ರಕಾರ ೧೬೬೪ ಕೋಟಿ ರೂಪಾಯಿಗಳನ್ನು

ಸಹಾಯಧನದ ರೂಪದಲ್ಲಿ ಕೊಡಲಾಯಿತು. ಪ್ರಸ್ತುತ ವರ್ಷದಲ್ಲಿ ೧೦೫ ಕೋಟಿ ರೂಪಾಯಿಗಳನ್ನು ಭಾರತದಲ್ಲಿಯ ಕುಟುಂಬ ಯೋಜನೆಗಾಗಿ ನಿಗದಿಮಾಡಲಾಗಿದೆ.

(ಬ) ಯೋಜನಾಕ್ರಮಗಳ ಯಶಸ್ಸು

ಭಾರತದಲ್ಲಿ ಕುಟುಂಬ ಯೋಜನೆಗಾಗಿ ಪಂಚ ವಾರ್ಷಿಕ ಯೋಜನೆಗಳಲ್ಲಿ ಭಾರೀ ಪ್ರಮಾಣದಲ್ಲಿ ಹಣವನ್ನು ವಿನಿಯೋಗಿಸುತ್ತಿದ್ದಾಗಲೂ ಕೂಡ ಹೇಳಿಕೊಳ್ಳುವಷ್ಟು ಪ್ರಗತಿಯಾಗಿಲ್ಲವೆಂಬುದು ಸರ್ವವಿಧಿತವಾಗಿದೆ. ಈ ವಿಷಯವು ಕಳೆದ ಎರಡು ದಶಕಗಳ ಪ್ರಗತಿಯನ್ನು ನೋಡಿದಲ್ಲಿ ಮನದಟ್ಟಾಗುವದು. ೧೯೬೧ನೇ ಇಸ್ವಿಯಲ್ಲಿ ಪ್ರತಿ ಸಾವಿರಕ್ಕೆ ೪೧.೭ ಜನನ ಪ್ರಮಾಣವಿತ್ತು. ಈ ಪ್ರಮಾಣವನ್ನು ೧೯೭೧ನೇ ಇಸ್ವಿಯಲ್ಲಿ ೩೭.೨ ರಷ್ಟಿರುವದು ಕಂಡು ಬಂದಿದೆ. ಈ ಅಲ್ಪ ಪ್ರಮಾಣದ ಇಳಿಕೆಗೆ (ಈ ಹತ್ತು ವರ್ಷಗಳ ಅವಧಿಯಲ್ಲಿ ಕೇವಲ ೪.೫ ರಷ್ಟು ಮಾತ್ರ) ಕುಟುಂಬ ಯೋಜನೆಯು ಎಷ್ಟರ ಮಟ್ಟಿಗೆ ಕಾರಣವಾಯಿತೆಂಬುದನ್ನು ಹೇಳಲು ಸಾಧ್ಯವಿಲ್ಲ. ಏಕೆಂದರೆ ೧೯೦೧ ರಲ್ಲಿ ಪ್ರತಿ ಸಾವಿರಕ್ಕೆ ೪೯.೨ ಜನನ ಪ್ರಮಾಣವು ೧೯೫೧ ರ ವೇಳೆಗೆ ೩೯.೯ ರಷ್ಟಾಯಿತು. ಈ ಅವಧಿಯಲ್ಲಿ ಕುಟುಂಬ ಯೋಜನಾ ಕಾರ್ಯಕ್ರಮಗಳು ಇದ್ದಿರಲಿಲ್ಲ. ಆದಾಗ್ಯೂ ಅಲ್ಪ ಸ್ವಲ್ಪ ಜನನ ಪ್ರಮಾಣದಲ್ಲಿ ಇಳಿಕೆಯು ಕಂಡುಬಂತು. ಆದ್ದರಿಂದ ೧೯೬೧–೧೯೭೧ ಅವಧಿಯಲ್ಲಿ ಆದ ಅಲ್ಪಸ್ವಲ್ಪ ಜನನ ಪ್ರಮಾಣದ ಇಳಿಕೆಗೆ ಕುಟುಂಬ

ಯೋಜನೆ ಒಂದೇ ಕಾರಣವೆಂದು ಹೇಳಬಾರದು. ಒಟ್ಟಿನಲ್ಲಿ ಕುಟುಂಬ ಯೋಜನೆಯ ಪ್ರಗತಿಯು ಜನನ ಪ್ರಮಾಣವನ್ನು ತಗ್ಗಿಸುವಲ್ಲಿ ತೀರಾ ಮಂದಗತಿಯಿಂದ ಸಾಗಿದೆ ಎಂದು ಹೇಳಬಹುದು. ಈ ಹಿನ್ನೆಲೆಯ ಆಧಾರದ ಮೇಲೆ ೧೯೭೯ರ ವೇಳೆಗೆ ಜನನ ಪ್ರಮಾಣವನ್ನು ಪ್ರತಿ ಸಾವಿರಕ್ಕೆ ೨೫ರಂತೆ ಇಳಿಸುವ ಗುರಿಯನ್ನು ಮುಟ್ಟುವುದು ಅಸಾಧ್ಯ ಎಂದು ಹೇಳಬಹುದು. ಈ ರೀತಿಯಲ್ಲಿ ಪ್ರಗತಿ ಕುಂಠಿತವಾಗಲು ಹಲವಾರು ಕಾರಣಗಳಿವೆ. ಈ ಕಾರಣಗಳನ್ನು ಸಮಾಯೋಜಿತವಾಗಿ ಲಕ್ಷ್ಯದಲ್ಲಿ ತಂದುಕೊಂಡು ಅವುಗಳಿಗೆ ಪರಿಹಾರಗಳನ್ನು ಕಂಡುಹಿಡಿಯಬೇಕಾಗಿದೆ.

ಮೊದಲನೆಯದಾಗಿ, ಪಂಕಿ (Loop) ಧಾರಣೆಯ ಬಗ್ಗೆ ಮಾಹಿತಿ ನೀಡುವಲ್ಲಿ, ಪಂಕಿ ಧಾರಣೆಗೆ ಒಳಪಟ್ಟವರಲ್ಲಿ ಹಲವಾರು ಸಂಶಯಗಳೂ, ತಪ್ಪು ಕಲ್ಪನೆಗಳೂ ಇವೆ

ಎರಡನೆಯದಾಗಿ, ಕುಟುಂಬ ಯೋಜನೆಗಾಗಿ ಖಾಸಗೀ ವೈದ್ಯರಿಂದ ಸಾಕಷ್ಟು ಸಹಕಾರ ಪಡೆಯಲು ನಾವು ಶಕ್ತರಾಗಿಲ್ಲ.

ಮೂರನೆಯದಾಗಿ, ಅಶಿಕ್ಷಿತ ವರ್ಗಗಳಲ್ಲಿ ಸಂತಾನ ಸಂಪತ್ತು ಒಂದೆಂಬ ಭಾವನೆ ಇರುವ ದಂಪತಿಗಳು, ಮುಂದೆ ಹುಟ್ಟುವ ಮಗು ಭಾಗ್ಯಾಧಿಪತಿಯೋ, ಭಾಗ್ಯವಂತೆಯೋ ಇರಬಹುದೆಂಬ ಭ್ರಮೆಯನ್ನು ಇನ್ನೂ ಬಿಟ್ಟಿಲ್ಲ. ಅದನ್ನು ಹೋಗಲಾಡಿಸಬೇಕಾಗಿದೆ.

ಯನ್ನು ಅತಿ ಮಹತ್ವದ್ದು. ಜನಸಂಖ್ಯಾ ಬೆಳವಣಿಗೆಯ ಪ್ರಮಾಣ ಮತ್ತು ಮಹಿಳೆಯರ ಸ್ಥಾನಮಾನದ ಮೇಲೆ ಶೀಘ್ರ ಪರಿಣಾಮ ಬೀರುವ ಕ್ರಮಗಳಲ್ಲಿ ಒಂದೆಂದರೆ ಕನ್ಯೆಯರ ಮದುವೆಯ ವಯಸ್ಸು ೧೮ಕ್ಕೆ ಮತ್ತು ವಯಸ್ಕರ ಮದುವೆಯ ವಯಸ್ಸು ೨೧ಕ್ಕೆ ಏರಿಸುವದೇ ಆಗಿದೆ.

ನಾಲ್ಕನೆಯದಾಗಿ ದೇಶದ ಜನರಲ್ಲಿ ಜನಸಂಖ್ಯಾ ಶಿಕ್ಷಣ ಹಾಗೂ ಸಾರ್ವಜನಿಕ ಸಂಪರ್ಕ ವಿಧಾನಗಳ ಅರಿವು ಮಾಡಿಕೊಡಬೇಕಾಗಿದೆ.

ಐದನೆಯದಾಗಿ ದೊಡ್ಡ ಪ್ರಮಾಣದಲ್ಲಿ ಗರ್ಭ ಪ್ರತಿಬಂಧಕ ಸಾಧನೆ, ಸಲಕರಣೆಗಳನ್ನು ತಯಾರುಮಾಡಿ ಪುಕ್ಕಟೆಯಾಗಿ ಜನರಿಗೆ ಹಂಚುವದು ದಂಪತಿಗಳಿಗೆ ವಂಧ್ಯಾಕರಣ (Sterilization) ದ ಬಗ್ಗೆ ಹೆಚ್ಚಿನ ಆಸಕ್ತಿ ಬೆಳೆಸುವಂತಾಗಬೇಕು. ಅವಿವಾಹಿತ ಸ್ತ್ರೀಯರ ಗರ್ಭಪಾತವನ್ನು ಕಾಯ್ದೆಬದ್ಧಗೊಳಿಸಬೇಕು.

ಆರನೆಯದಾಗಿ ಸಮಾಜಕಲ್ಯಾಣ ಕಾರ್ಯಕ್ರಮದ ಜೊತೆಗೆ ಕುಟುಂಬ ನಿಯಂತ್ರಣ ಯೋಜನೆಯನ್ನು ಹೊಂದಾಣಿಕೆ ಮಾಡಬೇಕು. ಹೆಚ್ಚಿನ ಅನುಭವವುಳ್ಳ ಮತ್ತು ಸಹಾನುಭೂತಿಪರನಾದ ಸಿಬ್ಬಂದಿಯನ್ನು ನಿಯಮಿಸಿಕೊಳ್ಳಬೇಕು. ಕುಟುಂಬಯೋಜನೆಯ ಮಹತ್ವದ ಬಗ್ಗೆ ವಿಸ್ತೃತವಾದ ಪ್ರಚಾರ ಪ್ರಭಾವಪೂರ್ಣವಾಗಿ ಜನನಿಬಿಡವಾದ ನಗರಗಳಲ್ಲಿ ಮತ್ತು ಹಳ್ಳಿ ಪಳ್ಳಿಗಳಿಗೂ ಆಗಬೇಕು.

ಏಳನೆಯದಾಗಿ ಗರ್ಭವತಿಯರಿಗೆ ಕೊಡುವ ಅನುಕೂಲತೆಗಳನ್ನು (Maternity Benefits) ನಿಲ್ಲಿಸಬೇಕು. ಕೊನೆಯದಾಗಿ ಜನನ ನಿಯಂತ್ರಣದ ಬಗೆಗಿನ ಹೊಸ ಸಂಶೋಧನೆಗಳಿಗೆ ಪ್ರೋತ್ಸಾಹ ನೀಡಬೇಕು.

(ಡ) **ಜನಸಂಖ್ಯಾ ಶಿಕ್ಷಣ** (Population Education) : ಭಾರತದಲ್ಲಿ ಕುಟುಂಬ ಯೋಜನೆಯ ಕುಂಠಿತ ಪ್ರಗತಿಗೆ ಅನೇಕ ಕಾರಣಗಳಲ್ಲಿ ಜನರು ಸ್ವಯಂಪ್ರೇರಿತರಾಗಿ ಮುಂದೆ ಬರದಿರುವದು ಅತಿಮುಖ್ಯ ಕಾರಣ. ಹಾಗಾದರೆ ಜನರು ಸ್ವಯಂಪ್ರೇರಣೆಯಿಂದ ಮುಂದೆ ಬರಲು ಜನಸಂಖ್ಯಾ ಶಿಕ್ಷಣವು ಅವಶ್ಯವಾಗಿದೆ. ಈ ಶಿಕ್ಷಣವು ಕೇವಲ ವಿವಾಹಿತರಿಗೆ ಸೀಮಿತವಾಗಿರದೆ ಮುಂಬರುವ ಪ್ರೌಢ ಪೀಳಿಗೆಗೆ ಕೊಟ್ಟಲ್ಲಿ ಪ್ರೌಢರಾದಾಗ ಸಹಜವಾಗಿಯೇ ಕುಟುಂಬ ಯೋಜನೆಯ ಅನುಷ್ಠಾನಕ್ಕೆ ಅವರು ಅಣಿಯಾಗುವರು. ಆದುದರಿಂದ ಬಾಲ್ಯದಿಂದ, ಪ್ರೌಢಾವಸ್ಥೆಯವರೆಗೆ ಕೊಡುವ ಜನಸಂಖ್ಯಾ ಶಿಕ್ಷಣವು ಕುಟುಂಬ ಯೋಜನೆಯ ಯಶಸ್ಸಿಗೆ ಸಹಕಾರಿಯಾಗುವದು.

ಜನಸಂಖ್ಯಾ ಶಿಕ್ಷಣವೆಂದರೆ ಕೇವಲ ಜನಸಂಖ್ಯೆಯ ಬೆಳವಣಿಗೆಗೆ ಸಂಬಂಧಪಟ್ಟದ್ದಲ್ಲ. ಜನಸಂಖ್ಯೆಯು ವ್ಯಕ್ತಿಯ ಕೌಟುಂಬಿಕ, ಸಾಮಾಜಿಕ ಜೀವನದ ಮೇಲೆ ಮತ್ತು ಅವನಿರುವ ವಾತಾವರಣದ ಮೇಲೆ ಎಷ್ಟೊಂದು ಪರಿಣಾಮ ಮಾಡುವದೆಂಬುದನ್ನು ಅವನಿಗೆ ತಿಳಿಸುವದೇ ಆಗಿದೆ. ಅಂದರೆ ಜನಸಂಖ್ಯಾ ಶಿಕ್ಷಣದ ಮೂಲ ಉದ್ದೇಶವು ಜನಸಂಖ್ಯೆಗೂ ವ್ಯಕ್ತಿ ಜೀವನಕ್ಕೂ

ದನ್ನು ತಿಳಿಸಿದಲ್ಲಿ ಜನಸಂಖ್ಯೆಯ ಆಗುಹೋಗುಗಳ ಅರಿವಿದ್ದ ಒಂದು ಪೀಳಿಗೆಯನ್ನೇ ರೂಪಿಸಿದಂತಾಗುವದು. ಇವರೇ ಪ್ರೌಢರಾದಾಗ ಕುಟುಂಬಯೋಜನೆಗೆ ಸ್ವಯಂಪ್ರೇರಿತರಾಗುವರು. ಆಗ ಕುಟುಂಬ ಯೋಜನೆಯ ವಿಧಾನಗಳ ಬಗ್ಗೆ ಸಲಹೆ ಸೂಚನೆಗಳನ್ನು ಕೊಡುವ ಕಾರ್ಯವಷ್ಟೇ ಉಳಿದಂತಾಗುವದು. ಈ ಕೆಲಸವನ್ನು ಕುಟುಂಬಯೋಜನಾ ಸಿಬ್ಬಂದಿಯವರು ಮಾಡಬೇಕಾಗುವದು. ಜನಸಂಖ್ಯೆಯ ಆಗುಹೋಗುಗಳ ಬಗ್ಗೆ ಅರಿವಿದ್ದ ಪೀಳಿಗೆಯೇ ಇರುವದರಿಂದ ಕುಟುಂಬ ಯೋಜನಾ ಸಿಬ್ಬಂದಿಯವರ ಕಾರ್ಯವು ಸುಲಭ ಸಾಧ್ಯವಾಗುವದು.

ಇನ್ನೊಂದು ಹಂತ ಮುಂದೆ ಹೋಗಿ ಕೆಲವು ಅತ್ಯಾವಶ್ಯಕ ಲೈಂಗಿಕ ಶಿಕ್ಷಣವನ್ನು ಕೊಡುವ ಪ್ರಯೋಗ ಮಾಡಬಹುದು. ಲೈಂಗಿಕ ಶಿಕ್ಷಣವೆಂದರೆ ಗರ್ಭಧರಿಸುವ ಬಗೆ, ಗರ್ಭನಿರೋಧಕ ಕಾರ್ಯವಿಧಾನ ಇತ್ಯಾದಿಗಳ ಪರಿಜ್ಞಾನವಾಗಿದೆ ಇಂಥ ಶಿಕ್ಷಣ ಹತ್ತನೆಯ ತರಗತಿಯ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಮಾತ್ರ ಕೊಡಬಹುದು.

ಭಾರತದಲ್ಲಿ ಕುಟುಂಬ ಯೋಜನಾ ಸಂಸ್ಥೆಯು ಮೊಟ್ಟಮೊದಲಿಗೆ ಈ ದಿಶೆಯಲ್ಲಿ ೧೯೬೮ರಲ್ಲಿ ತನ್ನ ಕಾರ್ಯಕ್ರಮವನ್ನು ಪ್ರಾರಂಭಿಸಿತು. ಜನಸಂಖ್ಯಾ ಶಿಕ್ಷಣವನ್ನು ಕೊಡುವ ವಿಷಯದಲ್ಲಿ ಜಗತ್ತಿನಲ್ಲಿಯೇ ಅತಿ ದೊಡ್ಡದಾದ "ಪಾತ್ ಫೈಂಡರ್" ಸಂಸ್ಥೆ (Path Finder Association) ದವರು ನಡೆಸಿದ

ಸಂಶೋಧನಾ ಅಧ್ಯಯನದ ಕೆಲವು ಮಹತ್ವದ ಅಭಿಪ್ರಾಯ ಈ ಸಂದರ್ಭದಲ್ಲಿ ಸ್ಮರಣೀಯವಾಗಿವೆ.

ಈ ದಿಶೆಯಲ್ಲಿ ಭಾರತ ಸರಕಾರವು ಆಸ್ಥೆ ತಳೆದು ಎಲ್ಲ ರಾಜ್ಯ ಸರಕಾರಗಳಿಗೂ ಜನಸಂಖ್ಯಾ ಅಧ್ಯಯನವನ್ನು ಶಿಕ್ಷಣದ ಪಠ್ಯಕ್ರಮಗಳಲ್ಲಿ ಸೇರಿಸುವದರ ಪ್ರಾಮುಖ್ಯತೆಯನ್ನು ತಿಳಿಸಿದೆ. ಕುಟುಂಬ ಯೋಜನೆಯು ಯಶಸ್ವಿಯಾಗಲು ಜನಸಂಖ್ಯಾ ಶಿಕ್ಷಣದ ಪಾತ್ರ ಬಹು ಮುಖ್ಯವಾದುದರಿಂದ ಈ ದಿಶೆಯಲ್ಲಿ ಈಗಾಗಲೇ ಪ್ರಾರಂಭವಾದ ಪ್ರಯತ್ನಗಳನ್ನು ವ್ಯವಸ್ಥಿತ ರೀತಿಯಲ್ಲಿ ತೀವ್ರಗೊಳಿಸಬೇಕು.

(೩) ಜನಸಂಖ್ಯಾವರ್ಷ :

೧೯೭೪ನೇ ವರ್ಷವನ್ನು ಜಾಗತಿಕ ಜನಸಂಖ್ಯಾ ವರ್ಷ (World Population Year) ಎಂದು ವಿಶ್ವಸಂಸ್ಥೆಯು ಆಚರಿಸಿತು. ಉತ್ತಮ ಮಾನವೀಯ ಅಸ್ತಿತ್ವಕ್ಕೆ ಬೇಕಾದ ಮಟ್ಟಕ್ಕಿಂತ ಕೆಳಗೆ ಇನ್ನೂ ಕೋಟ್ಯಾನುಕೋಟಿ ಜನರು ವಾಸಿಸುತ್ತಿರುವ ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರದಲ್ಲಿ ಶತಶತಮಾನಗಳಿಂದ ನಮ್ಮ ದೇಶವನ್ನು ಘಾಸಿಗೊಳಿಸಿದ ದಾರಿದ್ರ್ಯ ಶಮನಕ್ಕೆ ನಡೆಸಿದ ನಮ್ಮ ಸತತ ಸಂಗ್ರಾಮದ ಒಂದು ಪರಿಪೂರ್ಣ ಭಾಗವಾಗಿ ಕುಟುಂಬ ಯೋಜನಾ ಕಾರ್ಯಕ್ರಮಗಳನ್ನು ಆಚರಿಸಿದರೆ "ಜಾಗತಿಕ ಜನಸಂಖ್ಯಾ ವರ್ಷಕ್ಕೆ" ಮಹತ್ವವು ಪ್ರಾಪ್ತವಾಗುತ್ತದೆ. ದಾರಿದ್ರ್ಯದ ವಿರುದ್ಧ ನಡೆದ

ಈ ಜಾಗತಿಕ ಹೋರಾಟದ ಮೂಲಕ ಜನಸಂಖ್ಯೆ ಮತ್ತು ಕುಟುಂಬ ಯೋಜನೆಯ ಧೋರಣೆಗಳು ತಮ್ಮ ಅಂತಿಮ ಅನುಮತಿಯನ್ನು ಪಡೆಯಬಲ್ಲವು ಎಂದು ರಾಷ್ಟ್ರೀಯ ಗೋಷ್ಠಿಯಲ್ಲಿ ಕೇಂದ್ರ ಆರೋಗ್ಯ ಮತ್ತು ಕುಟುಂಬ ಯೋಜನಾ ಮಂತ್ರಿಗಳು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

೫. ಉಪಸಂಹಾರ

ರಾಷ್ಟ್ರೀಯ ಅಭಿವೃದ್ಧಿ ಮಂಡಳವು ಅಂತಿಮವಾಗಿ ಮಂಜೂರಿ ಇತ್ತ ಐದನೆಯ ಪಂಚವಾರ್ಷಿಕ ಯೋಜನೆಯ ಪತ್ರದಲ್ಲಿ ಯೋಜನಾ ಅವಧಿಯ ಕೊನೆಯ ೧೯೭೮-೧೯೭೯ ಇಸ್ವಿಯಲ್ಲಿ ೧೪೦ ದಶಲಕ್ಷ ಟನ್ ಆಹಾರ ಧಾನ್ಯ ಬೆಳೆಯುವ ಗುರಿಯನ್ನು ಇಟ್ಟು ಕೊಂಡಿದೆ ಮತ್ತು ನಾಲ್ಕನೆಯ ವರ್ಷವಾದ ೧೯೭೩-೧೯೭೪ರಲ್ಲಿ ೧೨೯ ದಶಲಕ್ಷ ಟನ್ ಆಹಾರಧಾನ್ಯ ಬೆಳೆಯುವ ಗುರಿಯನ್ನಿರಿಸಿಕೊಳ್ಳಲಾಗಿದೆ. ಆದರೆ ಈಗಿನ ಅಧಿಕೃತ ಅಂದಾಜಿನ ಮೇರೆಗೆ ಈ ವರ್ಷ ೧೧೧ ದಶಲಕ್ಷ ಟನ್ನಿಗಿಂತ ಹೆಚ್ಚು ಪ್ರಮಾಣಲ್ಲಿ ಉತ್ಪಾದನೆಯಾಗಲಾರದು ಎಂದು ತಿಳಿದುಬಂದಿದೆ. ಏಕೆಂದರೆ ದೇಶದಾದ್ಯಂತ ವರುಣದೇವರ ಅವಕೃಪೆಯಿಂದ ಬೆಳೆ ಫಲಿಸಲಿಲ್ಲ. ಐದನೆಯ ಪಂಚವಾರ್ಷಿಕ ಯೋಜನೆಯ ಗುರಿಯನ್ನು ಸಂಪೂರ್ಣವಾಗಿ ಮುಟ್ಟಿದರೂ ಈಗಿರುವದಕ್ಕಿಂತಲೂ ಕೇವಲ ೨೬ ದಶಲಕ್ಷ ಟನ್ನ ಮಾತ್ರ ಆಹಾರ ಧಾನ್ಯ ಹೆಚ್ಚಿಗೆ ಬೆಳೆದಂತಾಗುವದು. ಆದರೆ ಈ ಐದು ವರ್ಷಗಳ ಅವಧಿಯಲ್ಲಿ ಜನಸಂಖ್ಯೆಯ ಬೆಳವಣಿಗೆಯು ಈಗಿನಂತೆ ಪ್ರತಿ

ವರ್ಷ ೧೨ ದಶಲಕ್ಷದಷ್ಟು ಬೆಳೆಯುತ್ತಾ ಹೋದರೆ ಐದನೆಯ ಪಂಚವಾರ್ಷಿಕ ಯೋಜಯ ಅವಧಿಯ ವರೆಗೆ ಭಾರತದಲ್ಲಿ ೬ಕೋಟಿ ಹೆಚ್ಚು ಜನರಿಗೆ ಆಹಾರ ಒದಗಿಸಬೇಕಾಗುವದು.

೧೯೭೧ ನೇ ಇಸ್ವಿಯ ಜನಗಣತಿಯ ಮೇರೆಗೆ ಭಾರತದ ಜನಸಂಖ್ಯೆಯು ೫೪ಕೋಟಿ ೭೫ಲಕ್ಷ ಸಾವಿರ ಇತ್ತು. ಐದನೆಯ ಪಂಚವಾರ್ಷಿಕ ಯೋಜನೆಯಲ್ಲಿಟ್ಟುಕೊಂಡ ಗುರಿಯಾದ ೧೪೦ ದಶಲಕ್ಷ ಟನ್ ಆಹಾರಧಾನ್ಯವು ಉತ್ಪಾದನೆಯಾಗಿ ಅದೆಲ್ಲವೂ ಬಳಕೆಗೆ ಲಭ್ಯವಾದರೆ ಯೋಜನೆಯ ಕೊನೆಗೆ ಪ್ರತಿಯೊಬ್ಬನಿಗೆ ಒಂದು ವರ್ಷಕ್ಕೆ ೨೧೭ ಕಿಲೋಗ್ರಾಂ ಆಹಾರಧಾನ್ಯ ಬರುವದು. ಈ ತಲಾ ಪ್ರಮಾಣವು ನಾಲ್ಕನೆಯ ಪಂಚವಾರ್ಷಿಕ ಯೋಜನೆಯ ಕೊನೆಯ ಅವಧಿಯಲ್ಲಿ ೧೯೫ ಕಿಲೋಗ್ರಾಂ ಇತ್ತು.

ಆದರೆ ರಶಿಯಾದ ಗೋದಿಯ ಸಾಲವನ್ನು ೧೯೭೬-೧೯೭೭ ರಿಂದ ಪ್ರತಿವರ್ಷ ೪ ದಶಲಕ್ಷ ಟನ್‌ಗಳಂತೆ ಮರಳಿಕೊಡಬೇಕಾಗಿದೆ. ಈ ಯೋಜನೆಯ ಅವಧಿಯಲ್ಲಿ ಕೃಷಿ ಉತ್ಪಾದನೆ ಪಡೆಯುವ ಇತರ ವಾಸ್ತವಿಕಾಂಶಗಳನ್ನು ಗಣನೆಗೆ ತೆಗೆದುಕೊಂಡಾಗ ಗೋದಿ ಪ್ರತಿವರ್ಷ ಮರುಪಾವತಿ ಮಾಡುವ ಅಂಶ ಬಹಳ ಅಲ್ಪವಾದುದು. ಈ ಎಲ್ಲ ಅಂಶಗಳನ್ನು ಪರಿಶೀಲಿಸಿದಾಗ ಆಹಾರ ಧಾನ್ಯ ತಲಾಪ್ರಮಾಣದಲ್ಲಿ ಸಾಕಷ್ಟು ಹೆಚ್ಚಳ ಕಂಡು ಬರಲಾರದು ಎಂದು ಅನ್ನಿಸುತ್ತದೆ. ಆದುದರಿಂದ ಆರೋಗ್ಯ ಮತ್ತು ಕುಟುಂಬ ಯೋಜನಾ ಸಿಬ್ಬಂದಿಗಳು ಬಹುಮುಖ ದೃಷ್ಟಿಯಿಂದ ಜನಸಂಖ್ಯೆಯ ಸಮಸ್ಯೆಯನ್ನು ಪರಿಹರಿಸಲು

ಹೆಣಗಾಡಬೇಕಾಗಿದೆ. ಅವರು ಕೇವಲ ಸರಕಾರದಿಂದ ಸಿಗುವ ಸಹಾಯ ಹಾಗೂ ಯೋಜನೆಗಳಿಂದ ಸಂತುಷ್ಟರಾಗಬಾರದು. ಇದಲ್ಲದೆ ಇತರ ಸಂಬಂಧಿಸಿದ ಘಟಕಗಳಿಂದಲೂ ಕುಟುಂಬ ಯೋಜಯ ಅರಿವು ಜನಸಾಮಾನ್ಯರಿಗೆ ಆಗಬೇಕು. ನಮ್ಮ ದೇಶದಲ್ಲಿ ಯಾವುದಾದರೂ ಯೋಜನೆಯ ಕಾರ್ಯವು ಯಶಸ್ವಿಯಾಗಬೇಕಾದರೆ ಜನರ ಮತ್ತು ಸರಕಾರದ ಮಧ್ಯದಲ್ಲಿ ಸೂಕ್ತ ಸಹಕಾರವಿರಬೇಕು. ಅದಿಲ್ಲದೆ ಇದ್ದಲ್ಲಿ ಅತಿ ವಿವೇಕಯುತ ಯೋಜನೆಯು ನಿಷ್ಪರಿಣಾಮವಾಗುವದು. ಸದ್ಯದ ಪರಿಸ್ಥಿತಿಯಲ್ಲಿ ಯೋಜನೆಯ ಗೊತ್ತುಗುರಿಗಳನ್ನು ಪರಿಣಾಮಕರವಾದ ರೀತಿಯಲ್ಲಿ ಸಾಧಿಸುವಂತೆ ರೀತಿ ವಿಧಾನಗಳನ್ನು ರೂಪಿಸಿಕೊಳ್ಳಬೇಕು.

ಕೇಂದ್ರ ಸರಕಾರದ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಜಾರಿಗೆ ತರುವಲ್ಲಿ ಸಹ, ರಾಜ್ಯ ಸರಕಾರದಲ್ಲಿರುವ ಕೇಂದ್ರ ಸರಕಾರದ ಘಟಕಗಳ ಮತ್ತು ಸಂಬಂಧಪಟ್ಟ ರಾಜ್ಯ ಸರಕಾರದ ಘಟಕಗಳ ನಡುವೆ ಸೂಕ್ತ ಹಾಗು ನಿಕಟ ಸಹಕಾರವಿರಬೇಕಾದುದು ಅಗತ್ಯ. ಹೀಗಾದರೆ ಮಾತ್ರ ಐದನೆಯ ಪಂಚವಾರ್ಷಿಕ ಯೋಜನೆಯ ಅವಧಿಯ ವರೆಗೆ ಜನನ ಪ್ರಮಾಣವು ಪ್ರತಿಸಾವಿರಕ್ಕೆ ೨೫ ರಂತೆ ತರಬಹುದು. ಜನಸಂಖ್ಯೆಯನ್ನು ಹತೋಟಿಗೆ ತರುವ ಕಾರ್ಯವು ಒಂದು ರಾಷ್ಟ್ರೀಯ ವಿಷಯ. ಅನಿವಾರ್ಯವಾಗಿ ದೀರ್ಘಾವಧಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಕೇಂದ್ರ ಸರಕಾರವು ಈ ಉದ್ದೇಶಕ್ಕಾಗಿ ಕೋಟಿ ನೂರರ ಸಹಾಯಧನವನ್ನು ಮುಂದಿನ ಇಪ್ಪತ್ತೈದು ವರ್ಷಗಳ

ವರೆಗೆ ಮುಂದುವರಿಸುವದಾಗಿ ಭರವಸೆ ನೀಡಬೇಕಾದುದು ಅತ್ಯವಶ್ಯ. ಈ ಅಂಶವನ್ನು ಹೈದರಾಬಾದದಲ್ಲಿ ಸಮಾವೇಶಗೊಂಡ ಕುಟುಂಬಯೋಜನೆಯ ಪರಿಷತ್ತಿನಲ್ಲಿ ಸ್ಪಷ್ಟಪಡಿಲಾಗಿದೆ. ಕೇಂದ್ರ ಸರಕಾರವು ಈ ರೀತಿ ಭರವಸೆ ಕೊಟ್ಟರೆ ಮಾತ್ರ ಸ್ಥಳೀಯ ಪರಿಸ್ಥಿತಿಗಳಿಗೆ ಅನುಗುಣವಾಗಿ ಪ್ರತಿಯೊಂದು ರಾಜ್ಯವೂ ದೀರ್ಘಾವಧಿ ಕಾರ್ಯಕ್ರಮಗಳನ್ನು ರೂಪಿಸಲು ಸಾಧ್ಯವಾಗುತ್ತದೆ. ಈ ಕಾರ್ಯಕ್ರಮಗಳನ್ನು ಜನರು ಮನವರಿಕೆಮಾಡಿಕೊಂಡು ಅದು ತಮ್ಮ ಕಾರ್ಯ ಎಂದು ಒಪ್ಪಿಕೊಳ್ಳುವಂತೆ ಮಾಡಬೇಕಾದುದು ಹಿಂದೆಂದಿಗಿಂತಲೂ ಇಂದು ಅತಿ ಮುಖ್ಯವಾಗಿದೆ.

* * *

ಉಪನ್ಯಾಸ ಗ್ರಂಥಮಾಲೆಯ ಇತ್ತೀಚಿನ ಪ್ರಕಟನೆಗಳು

ಬೆಲೆ : ಪ್ರತಿ ಒಂದಕ್ಕೆ ೨೫ ಪೈಸೆ

೧. ಕರ್ನಾಟಕದಲ್ಲಿ ರಾಷ್ಟ್ರೀಯತೆಯ ಬೆಳವಣಿಗೆ
— ಎನ್. ಎ. ಪಾಟೀಲ

೨. ಜನಪದ ಸಾಹಿತ್ಯದಲ್ಲಿ ಮಾತೃವಾತ್ಸಲ್ಯ
— ಲೀಲಾವತಿ ತೋರಣಗಟ್ಟಿ

೩. ಜನಪದದಲ್ಲಿ ಮಕ್ಕಳ ಸಾಹಿತ್ಯ
— ಸಂಗಮೇಶ ಎಂ. ಬಿರಾದಾರ

೪. ಪ್ರೇಮಚಂದರ ಸಣ್ಣಕತೆಗಳು
— ಬಿ. ಎಫ್. ಹಸರಾಣಿ

೫. ಹೈದರಾಬಾದ ಕರ್ನಾಟಕ ಹಾಗೂ ಪಂ. ತಾರಾನಾಥರು
— ಎನ್. ಎ. ಪಾಟೀಲ

೬. ಭಾರತೀಯ ಸ್ತ್ರೀಯ ಬದಲಾಗುತ್ತಿರುವ ಸ್ಥಾನಮಾನಗಳು
— ಆರ್. ಡಿ. ಮೊಖಾಸಿ

೭. ಹಂಪೆ — ವಸುಂಧರಾ ಫಿಲಿಯೋಜಾ

೮. ಅನುಭವ ಮಂಟಪದ ಶಿವಶರಣೆಯರು
— ಶಶಿಕಲಾ ಮೋಳ್ಳಿ

೯. ಕಬ್ಬು — ಎಂ. ರಾಮದಾಸ ಕಾಮತ್

೧೦. ಕುಂಟುತ್ತಿರುವ ಕೈಮಗ್ಗ ಉದ್ದಿಮೆ
— ಈರಣ್ಣ ಹಟ್ಟಿ

ಪ್ರಸಾರಾಂಗ ವಿಸ್ತರಣ–ಪ್ರಕಟನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೫೮೦೦೦೩